**ಪದವಿ ಪೂರ್ವ ಶಿಕ್ಷಣ ಇಲಾಖೆ**

**ಎನ್‌ಸಿಇಆರ್‌ಟಿ ರಚಿತ 12ನೇ ತರಗತಿಯ ವ್ಯವಹಾರ ಅಧ್ಯಯನ ಭಾಗ–1 ಮತ್ತು ಭಾಗ–2ರ ವ್ಯವಹಾರ ಅಧ್ಯಯನ ಭಾಗ 1 ಮತ್ತು ಭಾಗ 2 ಕನ್ನಡ ಅನುವಾದಿತ (2016 ಡಿಸೆಂಬರ್ ಮರುಮುದ್ರಣ) ಜನವರಿ 2018 ಮಾಘ 1939ರ ಮರುಮುದ್ರಣದಲ್ಲಿ ಆಗಿರುವ ಬದಲಾವಣೆಗಳ ಕನ್ನಡ ಅನುವಾದಿತ ಅನುಸೂಚಿ**

**ಎನ್‌ಸಿಇಆರ್‌ಟಿ ರಚಿತ 12ನೇ ತರಗತಿಯ ವ್ಯವಹಾರ ಅಧ್ಯಯನ ಭಾಗ–1 ಮತ್ತು ಭಾಗ–2ರ ಜನವರಿ 2018 ಮಾಘ 1939ರ ಮರುಮುದ್ರಣದಲ್ಲಿ ಆಗಿರುವ ಬದಲಾವಣೆಗಳ ಕನ್ನಡ ಅನುವಾದಿತ ಅನುಸೂಚಿ**

# ವ್ಯವಹಾರ ಅಧ್ಯಯನ ಭಾಗ–1

## ಅಧ್ಯಾಯ–3

## ವ್ಯವಹಾರ ಪರಿಸರ

**ಎ) ಬಿಟ್ಟಿರುವುದು:**

**ಪುಟ ಸಂಖ್ಯೆ 98 ರಲ್ಲಿರುವ ಬಾಕ್ಸ್ ಟೆಕ್ಸ್ಟ್ – "ಹೊಸ ವ್ಯಾಪಾರ ನೀತಿ(1)ಯ ಪ್ರಮುಖ ಲಕ್ಷಣಗಳು" –ಇದನ್ನು ಕೈಬಿಡಲಾಗಿದೆ.**

**ಬಿ) ಸೇರ್ಪಡೆಯಾಗಿರುವುದು:**

1) **ಪುಟ 111 ರಲ್ಲಿರುವ "ವ್ಯವಹಾರ ಮತ್ತು ಕೈಗಾರಿಕೆಗಳ ಮೇಲೆ ಸರ್ಕಾರದ ನೀತಿಯ ಬದಲಾವಣೆಗಳ ಪರಿಣಾಮ" – ಈ ವಿಷಯಕ್ಕೂ ಮುನ್ನ ಮುಂದೆ ನೀಡಲಾಗಿರುವ ಪಠ್ಯ ಭಾಗವನ್ನು ಸೇರ್ಪಡೆ ಮಾಡಲಾಗಿದೆ:**

**ನೋಟುಗಳ ಅಮಾನ್ಯೀಕರಣ/ರದ್ದತಿ** (Demonetisation): 2016ರ ನವೆಂಬರ್ 8 ರಂದು ಭಾರತ ಸರ್ಕಾರವು ಭಾರತೀಯ ಅರ್ಥವ್ಯವಸ್ಥೆಯಲ್ಲಿ ಗಂಭೀರ ಸ್ವರೂಪದ ಸೂಚನೆಗಳ ಘೋಷಣೆಯನ್ನು ಮಾಡಿತು. ಅತಿ ಹೆಚ್ಚು ಮೌಲ್ಯವುಳ್ಳ ಎರಡು ಕರೆನ್ಸಿ ನೋಟುಗಳಾದ ರೂ. 500 ಮತ್ತು ರೂ.1000ಗಳನ್ನು, ಕೆಲವು ನಿರ್ದಿಷ್ಟ ಉದ್ದೇಶಗಳಾದ ಸೇವಾ ಶುಲ್ಕ ತೆರಿಗೆ ಪಾವತಿಗಳನ್ನು ಹೊರತುಪಡಿಸಿ, ಕೂಡಲೇ ಜಾರಿಗೆ ಬರುವಂತೆ ಅಮಾನ್ಯೀಕರಣಗೊಳಿಸಿ ಚಲಾವಣೆಯನ್ನು ನಿಲ್ಲಿಸಿತು. ಇದರಿಂದಾಗಿ ಚಲಾವಣೆಯಲ್ಲಿದ್ದ ಹಣದ ಶೇಕಡಾ 86ರಷ್ಟು ಅಮಾನ್ಯಗೊಂಡಿತು. ನಗದು ವಾಪಸಾತಿಗಳ ಮೇಲೆ ಹೇರಲಾದ ನಿರ್ಬಂಧಗಳೊಂದಿಗೆ ಭಾರತೀಯರು ಅಮಾನ್ಯಗೊಂಡ ಕರೆನ್ಸಿ ನೋಟುಗಳನ್ನು ಬ್ಯಾಂಕುಗಳಲ್ಲಿ ಠೇವಣಿ ಇರಿಸಬೇಕಾಯಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಗೃಹಬಳಕೆಯ ಹಣ ಮತ್ತು ಬ್ಯಾಂಕ್ ಠೇವಣಿಗಳ ಪರಿವರ್ತನೀಯತೆಯ ಮೇಲೆ ನಿರ್ಬಂಧಗಳನ್ನು ಹೇರಲಾಯಿತು.

ಭ್ರಷ್ಟಾಚಾರ, ಕಾನೂನುಬಾಹಿರ ಚಟುವಟಿಕೆಗಳಿಗೆ ಹೆಚ್ಚು ಮೌಲ್ಯದ ನೋಟುಗಳ ಬಳಕೆ ಮತ್ತು ವಿಶೇಷವಾಗಿ ತೆರಿಗೆ ಪ್ರಾಧಿಕಾರಗಳಿಗೆ ವರದಿ ಮಾಡದೇ ಸಂಗ್ರಹಿತವಾಗಿರುವ ಕಪ್ಪು ಹಣದ ಸಂಗ್ರಹ– ಇವುಗಳನ್ನು ನಿಗ್ರಹಿಸುವುದು ನೋಟು ಅಮಾನ್ಯೀಕರಣದ ಉದ್ದೇಶವಾಗಿದೆ.

**ಲಕ್ಷಣಗಳು:**

1. ನೋಟು ಅಮಾನ್ಯೀಕರಣವನ್ನು ತೆರಿಗೆ ಆಡಳಿತದ ಒಂದು ಕ್ರಮ ಎಂದು ನೋಡಲಾಗಿದೆ. ಘೋಷಿತ ಆದಾಯದಿಂದ ಉದ್ಭವಿಸಿದ ಕೈಲಿರಿಸಿಕೊಂಡ–ನಗದ(cash-holdings)ನ್ನು ಕೂಡಲೇ ಬ್ಯಾಂಕುಗಳಲ್ಲಿ ಠೇವಣಿಮಾಡಿ ಅದಕ್ಕೆ ಪ್ರತಿಯಾಗಿ ಹೊಸ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಆದರೆ, ಕಪ್ಪುಹಣ ಹೊಂದಿದವರು ತಮ್ಮ ಲೆಕ್ಕಕೊಡದ ಸಂಪತ್ತನ್ನು ಘೋಷಿಸಿ, ದಂಡದ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು.
2. ನೋಟು ಅಮಾನ್ಯೀಕರಣವು ಸರ್ಕಾರದ ಪಾಲಿಗೆ ಒಂದು ಬದಲಾವಣೆಯೂ ಆಗಿದೆ ಎಂದು ಬಿಂಬಿಸಲಾಗಿದ್ದು, ಇನ್ನು ಮುಂದೆ ತೆರಿಗೆ ತಪ್ಪಿಸಿಕೊಳ್ಳುವಿಕೆಯನ್ನು ಸಹಿಸುವುದಾಗಲೀ, ಒಪ್ಪಿಕೊಳ್ಳುವುದಾಗಲೀ ಸಾಧ್ಯವಿಲ್ಲವೆಂಬುದನ್ನು ಸೂಚಿಸುತ್ತದೆ.

3. ನೋಟು ರದ್ದತಿಯು ಉಳಿತಾಯಗಳನ್ನು ಔಪಚಾರಿಕ ಹಣಕಾಸು ವ್ಯವಸ್ಥೆಯೊಳಗೆ ಹರಿಸಿ, ತೆರಿಗೆ ಆಡಳಿತಕ್ಕೆ ಎಡೆಮಾಡಿಕೊಟ್ಟಿದೆ. ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ಠೇವಣಿಯಿರಿಸಲಾದ ನಗದಿನ ಹೆಚ್ಚು ಪಾಲು ವಾಪಸಾತಿಗೆ ಒಳಪಡುವಂತಿದ್ದರೂ, ಬ್ಯಾಂಕುಗಳ ಹೊಸ ಠೇವಣಿ ಯೋಜನೆಗಳು ಕಡಿಮೆ ಬಡ್ಡಿದರದಲ್ಲಿ ಆಧಾರ ಸಾಲ ಒದಗಿಸುವುದನ್ನು ಮುಂದುವರೆಸುತ್ತವೆ.

4. ನೋಟು ರದ್ದತಿಯ ಮತ್ತೊಂದು ಲಕ್ಷಣವೆಂದರೆ, ಅಲ್ಪ-ನಗದು (less-cash) ಅಥವಾ ನಗದು-ಮಿತ (cash-lite) ಆರ್ಥಿಕತೆಯನ್ನು ಸೃಜಿಸುವುದು. ಅಂದರೆ, ಹೆಚ್ಚು ಉಳಿತಾಯಗಳನ್ನು ಔಪಚಾರಿಕೆ ಹಣಕಾಸು ವ್ಯವಸ್ಥೆಯೊಳಗೆ ಹರಿಸುವುದು ಮತ್ತು ತೆರಿಗೆ ಪಾವತಿಯನ್ನು ಸುಧಾರಿಸುವುದು. ಇದರ ವಿರುದ್ಧ ವಾದಗಳಿರುವುದೂ ಹೌದಾಗಿದೆ. ಏಕೆಂದರೆ, ಡಿಜಿಟಲ್ ವ್ಯವಹಾರಗಳಲ್ಲಿ ಗ್ರಾಹಕರು ಸೆಲ್ ಫೋನುಗಳನ್ನು ಮತ್ತು ವ್ಯಾಪಾರಿಗಳು ಪಾಯಿಂಟ್ ಆಫ್ ಸೇಲ್ (Point of Sale) ಯಂತ್ರಗಳನ್ನು ಬಳಕೆ ಮಾಡಬೇಕಾಗಿದ್ದು, ಇವು, ಅಂತರ್ಜಾಲ ಸಂಪರ್ಕವಿದ್ದರೆ ಮಾತ್ರ ಕೆಲಸ ಮಾಡಬಲ್ಲದ್ದಾಗಿವೆ. ತದ್ವಿರುದ್ಧವಾಗಿ, ಈ ಅನನುಕೂಲಗಳನ್ನು ಔಪಚಾರಿಕ ಆರ್ಥಿಕತೆಯೊಳಗೆ ಜನರು ಹಣಕಾಸಿನ ಉಳಿತಾಯಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ತೆರಿಗೆ ತಪ್ಪಿಸುವಿಕೆಯನ್ನು ತಗ್ಗಿಸುವಲ್ಲಿ ಸಹಾಯ ಮಾಡುವುದೆಂಬ ತಿಳಿವಿನೊಂದಿಗೆ ಪ್ರತಿಯಾಗಿ ಸರಿದೂಗಿಸಬಹುದಾಗಿದೆ.

| |
|---|
| ಡಿಜಿಟಲೀಕರಣ(Digitalisation)ವು ವಿಶಾಲಾತ್ಮಕವಾಗಿ ಸಮಾಜವು ಮೂರು ವರ್ಗಗಳಾಗುವಂತೆ ಪ್ರಭಾವ ಬೀರಿದೆ: ಬಡವರು-ಡಿಜಿಟಲ್ ಆರ್ಥಿಕತೆಯಿಂದ ದೊಡ್ಡ ಪ್ರಮಾಣದಲ್ಲಿ ಹೊರಗುಳಿದವರು; ಡಿಜಿಟಲ್ ಆರ್ಥಿಕತೆಯಿಂದ ಸ್ವಲ್ಪಮಟ್ಟಿಗೆ ಬಹುಪಾಲು ಡಿಜಿಟಲ್ ಆರ್ಥಿಕತೆಯಿಂದ ಹೊರಗುಳಿದವರು; ಅಲ್ಪ ಶ್ರೀಮಂತರು-ಜನ್ ಧನ್ ಖಾತೆಗಳು ಮತ್ತು ರುಪೇ ಕಾರ್ಡುಗಳಡಿಯಲ್ಲಿ ಬಂದು ಡಿಜಿಟಲ್ ಆರ್ಥಿಕತೆಯ ಭಾಗವಾಗಿರುವವರು; ಮತ್ತು, ಶ್ರೀಮಂತರು- ಡಿಜಿಟಲ್ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ತೊಡಗಿಕೊಂಡವರು. |

**ನೋಟು ಅಮಾನ್ಯೀಕರಣದ ಪರಿಣಾಮ**

| | | |
|---|---|---|
| 1 | ಹಣ/ಬಡ್ಡಿ ದರ | (1) ನಗದು ವ್ಯವಹಾರದಲ್ಲಿ ಇಳಿಕೆ<br>(2) ಬ್ಯಾಂಕು ಠೇವಣಿಗಳ ಹೆಚ್ಚಳ<br>(3) ಹಣಕಾಸು ಉಳಿತಾಯಗಳಲ್ಲಿ ಹೆಚ್ಚಳ |
| 2 | ಖಾಸಗಿ ಸಂಪತ್ತು | ಅಮಾನ್ಯೀಕರಣಗೊಂಡ ಹೆಚ್ಚು ಮೌಲ್ಯದ ನೋಟುಗಳನ್ನು ಹಿಂದಿರುಗಿಸದಿರುವ ಕಾರಣ ಇಳಿಕೆಯಾಯಿತು ಮತ್ತು ಭೂ ವ್ಯವಹಾರ ಬೆಲೆಗಳು ಕುಸಿದವು |
| 3 | ಸಾರ್ವಜನಿಕ ವಲಯದ ಸಂಪತ್ತು | ಯಾವ ಪರಿಣಾಮವೂ ಆಗಿಲ್ಲ |
| 4 | ಡಿಜಿಟೈಜೇಷನ್ | ಡಿಜಿಟಲ್ ವ್ಯವಹಾರಗಳು ಹೊಸ ಬಳಕೆದಾರರಲ್ಲಿ (RuPay/AEPS) ಹೆಚ್ಚಿದವು |
| 5 | ಭೂ-ವ್ಯವಹಾರ (ರಿಯಲ್ ಎಸ್ಟೇಟ್) | ಬೆಲೆಗಳು ಇಳಿದವು |
| 6 | ತೆರಿಗೆ ಸಂಗ್ರಹ | ಹೆಚ್ಚಿದ ಮಾಹಿತಿ ಬಹಿರಂಗ ಪಡಿಸುವಿಕೆಯಿಂದಾಗಿ ಆದಾಯ ತೆರಿಗೆ ಸಂಗ್ರಹದಲ್ಲಿ ಏರಿಕೆ |

**(ಎಕನಾಮಿಕ್ ಸರ್ವೆ, 2016-17ರಿಂದ ತೆಗೆದುಕೊಳ್ಳಲಾಗಿದೆ)**

**2) ಪುಟ ಸಂಖ್ಯೆ 117ರಲ್ಲಿರುವ "ಚಟುವಟಿಕೆಗಳು" ಈ ಶೀರ್ಷಿಕೆಯಡಿಯಲ್ಲಿ ಮೊದಲನೆಯ ಚಟುವಟಿಕೆಯಾಗಿ ಈ ಕೆಳಗಿನ ಚಟುವಟಿಕೆಯನ್ನು ಸೇರ್ಪಡೆ ಮಾಡಲಾಗಿದೆ:**

1. 2016ರ ನವೆಂಬರ್, 8ರ ಮಧ್ಯರಾತ್ರಿಯಿಂದ ಜಾರಿಗೆ ಬರುವಂತೆ ಭಾರತ ಸರ್ಕಾರವು ರೂ.500 ಮತ್ತು ರೂ.1000 ಕರೆನ್ಸಿ ನೋಟುಗಳ ಅಮಾನ್ಯೀಕರಣವನ್ನು ಘೋಷಿಸಿತು. ಇದರ ಪರಿಣಾಮವಾಗಿ, ಅಸ್ತಿತ್ವದಲ್ಲಿದ್ದ ರೂ.500 ಮತ್ತು ರೂ.1000 ಕರೆನ್ಸಿ ನೋಟುಗಳು ಆ ದಿನಾಂಕದಿಂದ ಕಾನೂನುಬದ್ಧ ಚಲಾವಣಿ(legal tender)ಯಲ್ಲಿ ಉಳಿದಿಲ್ಲ. ಈ ಘೋಷಣೆಯ ನಂತರ ಭಾರತೀಯ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾವು ರೂ.500 ಮತ್ತು ರೂ.1000 ಮೌಲ್ಯಗಳ ಹೊಸ ಕರೆನ್ಸಿ ನೋಟುಗಳನ್ನು ನೀಡಿತು. ನೋಟು ಅಮಾನ್ಯೀಕರಣವನ್ನು ವ್ಯವಹಾರದ ಕಾನೂನು ಹಾಗೂ ಆರ್ಥಿಕ ಪರಿಸರದ ಹಿನ್ನೆಲೆಯಲ್ಲಿ ಚರ್ಚಿಸಿ.

# ವ್ಯವಹಾರ ಅಧ್ಯಯನ ಭಾಗ – 2

## ಅಧ್ಯಾಯ–10 ಹಣಕಾಸಿನ ಮಾರುಕಟ್ಟೆಗಳು

**ಎ) ಬಿಟ್ಟಿರುವುದು:**

**1) ಪುಟ ಸಂಖ್ಯೆ 378 ಮತ್ತು 379 ರಲ್ಲಿರುವ "ಭಾರತದ ಮುಂಗಟ್ಟೆ ವಿನಿಮಯ ಕೇಂದ್ರ (Over the Counter Exchange of India - OTCEI)" – ಈ ಪಠ್ಯ ಭಾಗವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ.**

**2) ಪುಟ ಸಂಖ್ಯೆ 386 ರಲ್ಲಿರುವ ಈ ಕೆಳಗಿನ ವಾಕ್ಯಗಳನ್ನು ಕೈ ಬಿಡಲಾಗಿದೆ:**

ರಾಷ್ಟ್ರೀಯ ಶೇರು ವಿನಿಮಯ ಕೇಂದ್ರವು ಇತ್ತೀಚಿನ, ಹೆಚ್ಚು ಅತ್ಯಾಧುನಿಕ ಹಾಗೂ ಸಂಪೂರ್ಣವಾಗಿ ತಂತ್ರಜ್ಞಾನ ಪ್ರೇರಿತ ವಿನಿಮಯ ಕೇಂದ್ರವಾಗಿದ್ದು 1992ರಲ್ಲಿ ನೋಂದಾಯಿಸಲ್ಪಟ್ಟಿತು. ಭಾರತೀಯ ಮುಂಗಟ್ಟು ಶೇರು ವಿನಿಮಯ ಕೇಂದ್ರವು 1992ರಲ್ಲಿ ನೋಂದಣಿಯಾಗಿದ್ದು ಮೂರು ಕೋಟಿಗಳಿಗಿಂತಲೂ ಕಡಿಮೆ ಪಾವತಿಸಿದ ಬಂಡವಾಳವಿರುವ ಸಣ್ಣ ಕಂಪನಿಗಳ ಶೇರುಗಳಿಗೆ ಯಾದೀಕರಣ ಸೌಲಭ್ಯವನ್ನು ಒದಗಿಸುತ್ತದೆ.

**3) ಪುಟ ಸಂಖ್ಯೆ 387 ರಲ್ಲಿರುವ ಬಹು ಆಯ್ಕೆ ಪ್ರಶ್ನೆಗಳಲ್ಲಿ ಪ್ರಶ್ನೆ ಸಂಖ್ಯೆ 7 ಮತ್ತು 8 ಗಳನ್ನು ಕೈ ಬಿಡಲಾಗಿದೆ.**

**4) ಪುಟ ಸಂಖ್ಯೆ 388 ರಲ್ಲಿರುವ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳಲ್ಲಿ ಪ್ರಶ್ನೆ ಸಂಖ್ಯೆ 8 ಅನ್ನು ಕೈ ಬಿಡಲಾಗಿದೆ.**

## ಅಧ್ಯಾಯ – 11

## ಮಾರಾಟ ಪ್ರಕ್ರಿಯೆ

**ಎ) ಬಿಟ್ಟಿರುವುದು:**


**1) ಪುಟ 463 ಮತ್ತು 464 ರಲ್ಲಿರುವ ಬಾಕ್ಸ್ ಟೆಕ್ಸ್ಟ್ "ಮೌಲ್ಯ ಜಾಹೀರಾತು" (Value AD) – ಇದನ್ನು ಕೈ ಬಿಡಲಾಗಿದೆ.**

## ಅಧ್ಯಾಯ – 12

## ಗ್ರಾಹಕ ರಕ್ಷಣೆ

ಎ) ಸೇರ್ಪಡೆಯಾಗಿರುವುದು:

**1) ಪುಟ 505 ರಲ್ಲಿ "ಬಳಕೆದಾರ ರಕ್ಷಣಾ ಕಾಯ್ದೆಯಡಿ ಇರುವ ಪರಿಹಾರ ಸಂಸ್ಥೆಗಳು"– ಈ ಚಿತ್ರದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸೇರಿಸಿದೆ ಹಾಗೂ ಬಾಣದ ಗುರುತುಗಳನ್ನು ಮೇಲ್ಮುಖವಾಗಿ ತೋರಿಸಿದೆ.**




**2) ಪುಟ ಸಂಖ್ಯೆ 506 ರಲ್ಲಿ "ಯಾರು ದೂರನ್ನು ಸಲ್ಲಿಸಬಹುದು?" ಈ ಶೀರ್ಷಿಕೆಯಡಿಯಲ್ಲಿ ಬರುವ (i) ಮತ್ತು (vi) ಗಳು ಬದಲಾವಣೆಗೊಂಡಿವೆ.**

**ಯಾರು ದೂರನ್ನು ಸಲ್ಲಿಸಬಹುದು? (Who can file a complaint?):** ಒಂದು ದೂರನ್ನು ಸೂಕ್ತ ಬಳಕೆದಾರ ವೇದಿಕೆಯಲ್ಲಿ ಕೆಳಕಂಡವರು ಸಲ್ಲಿಸಬಹುದು:

(i) **ಯಾವೊಬ್ಬ ಬಳಕೆದಾರನು/ಳು ತಾನೇ ಸ್ವತಃ ದೂರನ್ನು ಸಲ್ಲಿಸಬಹುದು ಮತ್ತು ಯಾವುದೇ ವಕೀಲ/ವೃತ್ತಿಪರರ ಸೇವೆಗಳನ್ನು ಪಡೆಯುವ ಅಗತ್ಯವಿಲ್ಲ.**

(ii) ಯಾವುದೇ ನೋಂದಾಯಿತ ಬಳಕೆದಾರರ ಸಂಘ;

(iii) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ;

(iv) ಸಮಾನ ಹಿತಾಸಕ್ತಿಯನ್ನು ಹೊಂದಿರುವ ಅಸಂಖ್ಯಾತ ಬಳಕೆದಾರರ ಪರವಾಗಿ ಒಬ್ಬ ಅಥವಾ ಹೆಚ್ಚಿನ ಬಳಕೆದಾರರು; ಮತ್ತು

(v) ಮೃತ ಬಳಕೆದಾರನ ಪರವಾಗಿ ಅವನ ಕಾನೂನುಬದ್ಧ ವಾರಸುದಾರ ಅಥವಾ ಅವರ ಪ್ರತಿನಿಧಿ.

(vi) **ಬಳಕೆದಾರ ರಕ್ಷಣಾ ಕಾಯಿದೆ 1986ರ ಸೆಕ್ಷನ್ 2(ಬಿ) ಅಡಿಯಲ್ಲಿ ದೂರು.**

**3) ಪುಟ 507ರಲ್ಲಿ ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಮತ್ತು ರಾಷ್ಟ್ರೀಯ ಆಯೋಗಗಳ ವಿವರಣೆಯ ಮೊದಲಿಗೆ ಹೊಸ ವಾಕ್ಯವೊಂದನ್ನು ಸೇರ್ಪಡೆ ಮಾಡಲಾಗಿದೆ:**

**1. ಜಿಲ್ಲಾ ವೇದಿಕೆ** (District Forum): **ಭಾರತದಲ್ಲಿ 644 ಜಿಲ್ಲಾ ವೇದಿಕೆಗಳಿವೆ.** ಜಿಲ್ಲಾ ವೇದಿಕೆಯು ಒಬ್ಬ ಅಧ್ಯಕ್ಷ ಮತ್ತು ಇತರ ಇಬ್ಬರು ಸದಸ್ಯರನ್ನು ಹೊಂದಿದ್ದು, ಅವರಲ್ಲಿ ಒಬ್ಬರು ಮಹಿಳೆಯಾಗಿರಬೇಕು.......

2. **ರಾಜ್ಯ ಆಯೋಗ** (State Commission): **ಭಾರತದಲ್ಲಿ 35 ರಾಜ್ಯ ಆಯೋಗಗಳಿವೆ.** ಪ್ರತಿಯೊಂದು ರಾಜ್ಯ ಆಯೋಗದಲ್ಲಿ ಒಬ್ಬ ಅಧ್ಯಕ್ಷ ಮತ್ತು ಇಬ್ಬರಿಗಿಂತ ಕಡಿಮೆ ಇಲ್ಲದಂತೆ ಇತರೆ ಸದಸ್ಯರಿರಬೇಕು, ಅದರಲ್ಲಿ ಒಬ್ಬರು ಮಹಿಳೆಯಾಗಿರಬೇಕು............

3. **ರಾಷ್ಟ್ರೀಯ ಆಯೋಗ** (National Commission): **ರಾಷ್ಟ್ರೀಯ ಆಯೋಗವು, ಜಮ್ಮು ಮತ್ತು ಕಾಶ್ಮೀರ ರಾಜ್ಯವೊಂದನ್ನು ಹೊರತುಪಡಿಸಿ, ದೇಶದಾದ್ಯಂತ ತನ್ನ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ.** ರಾಷ್ಟ್ರೀಯ ಆಯೋಗವು ಒಬ್ಬ ಅಧ್ಯಕ್ಷ ಮತ್ತು ಕನಿಷ್ಠ ಪಕ್ಷ ನಾಲ್ಕು ಇತರ ಸದಸ್ಯರನ್ನು ಹೊಂದಿರುತ್ತದೆ. ಇವರಲ್ಲಿ ಒಬ್ಬರು ಮಹಿಳೆಯಾಗಿರಬೇಕು...........

## ಅಧ್ಯಾಯ 13

## ಉದ್ಯಮಶೀಲತೆ ಅಭಿವೃದ್ಧಿ

**ಎ) ಬಿಟ್ಟಿರುವುದು:**

**1) ಪುಟ 541 ರಲ್ಲಿ – "ಉದ್ಯಮಶೀಲತೆಯ ಅಭಿವೃದ್ಧಿಯ ಪ್ರಕ್ರಿಯೆ" – ಈ ಭಾಗದಲ್ಲಿ ಈ ಕೆಳಕಂಡ ಪಠ್ಯ ಭಾಗವನ್ನು ಕೈ ಬಿಡಲಾಗಿದೆ.**

"........ಇದಕ್ಕೆ ಸಂಬಂಧಿಸಿದಂತೆ, ಅಪೇಕ್ಷಣೀಯತೆ ಮತ್ತು ಕಾರ್ಯಸಾಧ್ಯತೆಗಳ ಗ್ರಹಿಸುವಿಕೆ ಹಾಗೂ ತನ್ಮೂಲಕ ಉದ್ಯಮಶೀಲತೆಯ ಅಭಿವೃದ್ಧಿಗಳ ನಿಕಟತೆಯನ್ನು ನಿರ್ಧರಿಸುವ ಪರಿಸರದ ಅಂಶಗಳು ಹಾಗೂ ವ್ಯಕ್ತಿಯಲ್ಲಿನ ಅಂಶಗಳೆರಡನ್ನೂ ಗಮನಿಸಬೇಕಾದ ಅವಶ್ಯಕತೆ ಇದೆ. ಆದ್ದರಿಂದ, ಒಬ್ಬನು ತನ್ನ ಅಗತ್ಯಕ್ಕೆ ತಕ್ಕಂತೆ ಉದ್ಯಮಶೀಲತೆಯ ಅಭಿವೃದ್ಧಿ ಪ್ರಕ್ರಿಯೆಯ ಮಾದರಿಯನ್ನು ರೂಪಿಸಬಹುದು.

ಸಾಮಾನ್ಯವಾಗಿ, ವ್ಯಕ್ತಿಯ ಸಾಧನೆಗೆ ಪ್ರಾಮುಖ್ಯತೆ ನೀಡುವ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಉದ್ಯಮಶೀಲತೆಗೆ ಹೆಚ್ಚು ಸೂಕ್ತವಾಗುತ್ತದೆ. ವೈಯಕ್ತಿಕ ಆದಾಯದ ಮೇಲೆ ಕಡಿಮೆ ದರದ ತೆರಿಗೆ, ಕಡಿಮೆ ಬಡ್ಡಿಯ ದರ ಮತ್ತು ಸಾಧಾರಣ ಹಣದುಬ್ಬರಗಳು ಉದ್ಯಮಶೀಲತೆಯ ಚಟುವಟಿಕೆಯನ್ನು ಹುರಿದುಂಬಿಸುತ್ತವೆ. (ಇದು ಏಕೆ ಹೀಗೆ ಎಂದು ನೀವು ಆಲೋಚಿಸುವಿರಾ?) ದೇಶೀಯ ಹಣದ ಸಾಮಾನ್ಯ ಕಡಿಮೆ ಬಾಹ್ಯಮೌಲ್ಯವು ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಾಧಾರಣವಾಗಿ ಕಡಿಮೆ ವಿನಿಮಯ ದರವು ಆಮದು ಪರ್ಯಾಯ ಮತ್ತು ರಫ್ತು ಪ್ರವರ್ತನಾ ಉದ್ಯಮಶೀಲತೆಯನ್ನು ಹುರಿದುಂಬಿಸುತ್ತದೆ. (ಏಕೆ ಹೀಗೆ ಎಂದು ನೀವು ವಿಚಾರಮಾಡುವಿರಾ?) ಚೆನ್ನಾಗಿ ಅಭಿವೃದ್ಧಿ ಹೊಂದಿದ ಹಣಕಾಸು ವ್ಯವಸ್ಥೆ, ಉತ್ತಮ ಮೂಲಭೂತ ಸೌಕರ್ಯಗಳು, ಸಹಾಯಕ ನೌಕರಶಾಹಿ ವ್ಯವಸ್ಥೆ ಎಲ್ಲವೂ ಉದ್ಯಮಶೀಲತೆಯ ಮೇಲೆ ಅನುಕೂಲಕರ ಪರಿಣಾಮ ಬೀರುತ್ತವೆ. ವಿಶೇಷವಾಗಿ ವಿನ್ಯಾಸಗೊಳಿಸಿದ ಮತ್ತು ಸಮರ್ಪಣಾ ಮನೋಭಾವದ ಸಂಸ್ಥೆಗಳಾದ ರಾಷ್ಟ್ರೀಯ ಉದ್ಯಮಶೀಲತೆ ಮತ್ತು ಸಣ್ಣ ವ್ಯವಹಾರಗಳ ಅಭಿವೃದ್ಧಿ ಸಂಸ್ಥೆ (ಭೇಟಿ ನೀಡಿ, niesbud.nic.in), ಭಾರತೀಯ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ(ಭೇಟಿ ನೀಡಿ, www.ediindia.org)ಗಳು ನಡೆಸುವ ಉದ್ಯಮಶೀಲತೆಯ ಜಾಗೃತಿ ಮತ್ತು ಉದ್ಯಮಶೀಲತೆಯ ಅಭಿವೃದ್ಧಿ ಕಾರ್ಯಕ್ರಮ(EAPs ಮತ್ತು EDPs)ಗಳು ಈ ಚಟುವಟಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತವೆ.

ಪ್ರಸ್ತುತ ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವು ಉದ್ಯಮಶೀಲತೆಯನ್ನು ಬಲಗೊಳಿಸುವ ಅಥವಾ ದುರ್ಬಲಗೊಳಿಸುವ ಪ್ರಮುಖ ಅಂಶವಾಗಿದೆ. ಕಸುಬುಗಳನ್ನು ಆಯ್ಕೆಮಾಡಿಕೊಳ್ಳುವ ವ್ಯಕ್ತಿಯ ಸ್ವಾತಂತ್ರ್ಯವನ್ನು ಗೌರವಿಸುವ, ವೈಚಾರಿಕತೆ, ಶೋಧನೆ ಮತ್ತು ಪ್ರಾಯೋಗಿಕತೆಯನ್ನು ಉತ್ತೇಜಿಸುವ, ವ್ಯಕ್ತಿಯ ಸಾಧನೆಯನ್ನು ಕೊಂಡಾಡುವ ಮತ್ತು ಒಟ್ಟಿನಲ್ಲಿ ಉದ್ಯಮಸಾಹಸಿಗಳಿಗೆ ಮಹತ್ವದ ಸ್ಥಾನವನ್ನು ನೀಡುವ ಸಮಾಜಗಳು, ಉದ್ಯಮಶೀಲತೆಯನ್ನು ವೃತ್ತಿಜೀವನವೆಂದು ತೆಗೆದುಕೊಳ್ಳುವ ಅರ್ಹ ಮತ್ತು ಆಸಕ್ತ ಪುರುಷರು ಮತ್ತು ಮಹಿಳೆಯರ ಸ್ವ-ಸುಸ್ಥಿರವಾದ ಪೂರೈಕೆಯನ್ನು ಹೊಂದಬಹುದಾಗಿದೆ."

**2) ಪುಟ 543 ಮತ್ತು 544 ರಲ್ಲಿರುವ " ಉದ್ಯಮಶೀಲತೆಯ ಅಭಿವೃದ್ಧಿಯಲ್ಲಿ ವ್ಯಕ್ತಿಯ ಪಾತ್ರ" ಈ ಪಠ್ಯಭಾಗವನ್ನು ಕೈ ಬಿಡಲಾಗಿದೆ.**

**"ಉದ್ದಿಮೆಶೀಲತೆಯ ಅಭಿವೃದ್ಧಿಯಲ್ಲಿ ವ್ಯಕ್ತಿಯ ಪಾತ್ರ** (The Role of the Individual in Entrepreneurship Development)

ಶ್ರೀಯುತ ನಾರಾಯಣ ರೆಡ್ಡಿಯವರು ಸಣ್ಣ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸಲು ಆಸೆ ಹೊಂದಿದ್ದರು ಮತ್ತು ಅವರಲ್ಲಿರುವ ವಿದ್ಯಾರ್ಹತೆಗಳು, ಅನುಭವ ಮತ್ತು ಅವಶ್ಯಕ ಮೌಲ್ಯಗಳು, ಮನೋಭಾವನೆಗಳು ಮತ್ತು ಪ್ರೇರೇಪಣೆಯಿಂದಾಗಿ ಅದನ್ನು ಸಾಧಿಸುವ ಸಾಮರ್ಥ್ಯ ಅಥವಾ ಸಿದ್ಧತೆಯನ್ನೂ ಸಹ ಹೊಂದಿದ್ದರು (ಆರಂಭದ ಪ್ರಕರಣವು ಇದನ್ನು ವಿವರಿಸಿರಲಿಲ್ಲ. ನಾವು ಇವುಗಳನ್ನು ಸರಿಯಾದ ಸ್ಥಳಗಳಲ್ಲಿ ಚರ್ಚಿಸೋಣ). ನೀವು ಸಹ ಅಪೇಕ್ಷೆ (ಒಪ್ಪಿಗೆ)–ಸಾಮರ್ಥ್ಯ(ಅರ್ಹತೆ)ಗಳ ಹಂಚಿಕೆಯಲ್ಲಿ ನಿಮ್ಮನ್ನು ಎಲ್ಲಿ ಕಾಣುವಿರಿ ಎಂಬುದನ್ನು ನೋಡಬಹುದು.

ನೀವು ಹಂಚಿಕೆಯ ಅಂಕಿಸಂಖ್ಯೆಯನ್ನು ನೋಡಿದರೆ, ಸಮರ್ಥ ಮತ್ತು ಆಸಕ್ತ ಪುರುಷ ಮತ್ತು ಮಹಿಳೆಯರು ಉದ್ಯಮಶೀಲತೆಗೆ ಸಿದ್ಧ ಮೂಲವಾಗುತ್ತಾರೆ. ಅಂತಹ ವ್ಯಕ್ತಿಗಳು ತಮ್ಮ ಹಾದಿಯಲ್ಲಿ ಬರುವ ಮೊದಲನೇ ಅವಕಾಶವನ್ನೇ ತಮ್ಮದಾಗಿಸಿಕೊಂಡು ಮೇಲೇರಲು ಉಪಯೋಗಿಸುತ್ತಾರೆ. ನೆನಪಿಸಿಕೊಳ್ಳಿ, ನಾರಾಯಣ ರೆಡ್ಡಿಯವರು ಗಲ್ಫ್‌ನಿಂದ ವಾಪಸ್ಸಾಗಿದ್ದ ಇಬ್ಬರು ವೈದ್ಯರನ್ನು ಭೇಟಿಯಾಗುತ್ತಿದ್ದಂತೆ ಆ ಅವಕಾಶವನ್ನು ಬಳಸಿಕೊಂಡು ಮೇಲೇರಿದರು.

ಯಾವುದೇ ಸಮಯದಲ್ಲಿ, ತಮ್ಮದೇ ಆದ ವ್ಯವಹಾರವನ್ನು ಸ್ಥಾಪಿಸಲು "ಆಸೆ" ಹೊಂದಿರುವ ಬಹಳಷ್ಟು ಪುರುಷರು ಮತ್ತು ಮಹಿಳೆಯರು ಇದ್ದಾರೆ, ಆದರೆ ಉದ್ಯಮಶೀಲತೆಗೆ ಸ್ವಯಂಗ್ರಹಿಸಿದ ಅಡಚಣೆಗಳನ್ನು ಅನುಭವಿಸುತ್ತಾರೆ. ಸಂಪನ್ಮೂಲಗಳು (ಅಥವಾ ಬಹಳ ಸರಿಯಾಗಿ ಹೇಳುವುದಾದರೆ ಸಂಪನ್ಮೂಲಪೂರ್ಣತೆ), ತಿಳುವಳಿಕೆ/ಜ್ಞಾನ ಮತ್ತು ಕೌಶಲ್ಯತೆಯ ಕೊರತೆಯಿಂದಾಗಿ ಅವರು ತಮ್ಮ ಸ್ವಸಾಮರ್ಥ್ಯದ ಬಗ್ಗೆ ಕಡಿಮೆ ಗ್ರಹಿಕೆಯನ್ನು ಹೊಂದಿರಬಹುದು. ಒಟ್ಟಾರೆಯಾಗಿ ಇವುಗಳನ್ನು ಕಾರ್ಯಕ್ಷಮತೆಗಳು ಎಂದು ಉಲ್ಲೇಖಿಸಬಹುದು. ಅವುಗಳ ಬಗ್ಗೆ ಈಗ ನಮ್ಮ ಗಮನವನ್ನು ಹರಿಸೋಣ. "

**3) ಪುಟ 543 ರಲ್ಲಿರುವ ಬಾಕ್ಸ್ ಟೆಕ್ಸ್ಟ್– "ವ್ಯವಹಾರ ಯೋಜನೆ (Business Plan)" –ಇದನ್ನು ಕೈ ಬಿಡಲಾಗಿದೆ.**

**ವ್ಯವಹಾರದ ಯೋಜನೆ** (Business Plan)

1) ಕಾರ್ಯನಿರ್ವಾಹಕ ಸಾರಾಂಶ

2) ವ್ಯವಹಾರ /ಕೈಗಾರಿಕೆಯ ಹಿನ್ನೆಲೆ

3) ನೀಡುವ ಉತ್ಪನ್ನ/ಸೇವೆ

4) ಮಾರುಕಟ್ಟೆ ವಿಶ್ಲೇಷಣೆ

5) ಮಾರಾಟ ಮತ್ತು ಮಾರಾಟ ಪ್ರಕ್ರಿಯೆಯ ಕಾರ್ಯತಂತ್ರ

6) ಉತ್ಪಾದನೆ/ಕಾರ್ಯನಿರ್ವಹಣೆಯ ಕಾರ್ಯತಂತ್ರ

7) ನಿರ್ವಹಣೆ

8) ನಷ್ಟಭಯದ ಅಂಶಗಳು

9) ಅವಶ್ಯಕವಿರುವ ಬಂಡವಾಳ

10) ಹೂಡಿಕೆ ಇದ್ದಾಗ ಮತ್ತು ಇಲ್ಲದಾಗ ದೊರೆವ ಪ್ರತಿಫಲ ಮತ್ತು ಹೊರಬರುವ ವಿಧಾನಗಳು

11) ಮಾರಾಟದ ವರಮಾನದ ಬಳಕೆ

12) ಹಣಕಾಸಿನ ಸಾರಾಂಶಗಳು

13) ಅನುಬಂಧಗಳು, ಉದಾಹರಣೆಗೆ, ಮಾರುಕಟ್ಟೆಯ ಸಮೀಕ್ಷೆಯ ಮೇಲಿನ ವರದಿಗಳು, ಹಣಕಾಸಿನ ತಃಖ್ತೆಗಳು, ಪಥ ದಾಖಲೆ (track record), ಇತ್ಯಾದಿ.

**ಬಿ) ಸೇರ್ಪಡೆಯಾಗಿರುವುದು:**

**1) ಪುಟ 541 ರಲ್ಲಿ – "ಉದ್ಯಮಶೀಲತೆಯ ಅಭಿವೃದ್ಧಿಯ ಪ್ರಕ್ರಿಯೆ" – ಈ ಭಾಗದಲ್ಲಿ ಈ ಕೆಳಕಂಡ ಪಠ್ಯ ಭಾಗವನ್ನು ಸೇರ್ಪಡೆ ಮಾಡಲಾಗಿದೆ:**

**ಉದ್ಯಮಶೀಲತೆಯ ಅಭಿವೃದ್ಧಿ ಪ್ರಕ್ರಿಯೆ** (The Process of Entrepreneurship Development)

ಉದ್ಯಮಶೀಲತೆಯು ತನ್ನಷ್ಟಕ್ಕೆ ತಾನೇ ಉದ್ಭವಿಸುವುದಿಲ್ಲ. ಬದಲಾಗಿ, ಅದು ವ್ಯಕ್ತಿ ಮತ್ತು ಪರಿಸರಗಳ ನಡುವಿನ ಚಲನಾತ್ಮಕ ಪರಸ್ಪರ ಕ್ರಿಯೆಯ ಫಲಿತಾಂಶವಾಗಿದೆ. ಅಂತಿಮವಾಗಿ, ಉದ್ಯಮಶೀಲತೆಯನ್ನು ಜೀವನ ವೃತ್ತಿಯೆಂದು ಆಯ್ಕೆ ಮಾಡಿಕೊಳ್ಳುವುದು ವ್ಯಕ್ತಿಯ ಕೈಯಲ್ಲಿದೆಯಾದರೂ, ಆತನು ಅದನ್ನು ಅಪೇಕ್ಷಣೀಯ ಹಾಗೂ ಕಾರ್ಯಸಾಧುವಾದ ಆಯ್ಕೆಯೆಂದು ನೋಡಬೇಕು. ಇದಕ್ಕೆ ಸಂಬಂಧಿಸಿದಂತೆ, ಪರಿಸರದ ಅಂಶಗಳೊಂದಿಗೆ ವ್ಯಕ್ತಿಗತ ಅಪೇಕ್ಷಣೀಯತೆ ಮತ್ತು ಕಾರ್ಯಸಾಧ್ಯತೆಗಳ ಗ್ರಹಿಸುವಿಕೆಗಳತ್ತ ಗಮನ ಹರಿಸುವುದು ಕಡ್ಡಾಯವಾಗುತ್ತದೆ.

> ಒಂದು ವೇಳೆ, ನಿಮ್ಮ ಆಲೋಚನೆಯು ಕೇವಲ ಒಂದು ಆಲೋಚನೆಯಾಗಿರದೇ ಇದ್ದರೆ?
> ಒಂದು ವೇಳೆ, ನಿಮ್ಮ ಆಲೋಚನೆಯು ದಿನದ ಬೆಳಕನ್ನು ಕಾಣುವಂತಾದರೆ?
> ಒಂದು ವೇಳೆ, ಅದು ನಿಜವಾಗಿ ಉದಿಸಿದ್ದರೆ?
> ಒಂದು ವೇಳೆ, ಆ ಆಲೋಚನೆಯಲ್ಲಿ ನಂಬಿಕೆಯಿಟ್ಟು ಯಾರಾದರೂ ನಿಮಗೆ ಸಿಕ್ಕು ಅದನ್ನು ಪೋಷಿಸುವಂತಾದರೆ?
> ಒಂದು ವೇಳೆ, ಆ ಆಲೋಚನೆಯ ಮೇಲೆ ಪಯಣಿಸುವ ದಾರಿಯನ್ನು ನೀವು ಕಂಡುಕೊಂಡರೆ?
> ಒಂದು ವೇಳೆ, ಅದು ಬೆಳೆದು ಅರಳುವಂತಾದರೆ?
> ಒಂದು ವೇಳೆ, ವಿಶ್ವವು ನಿಮ್ಮ ಆಲೋಚನೆಯನ್ನು ಒಪ್ಪಿಕೊಂಡರೆ?
> ಒಂದು ವೇಳೆ, ನಿಮ್ಮ ಆಲೋಚನೆಯು ಮುಂದಿನ ಪೀಳಿಗೆಗಳಿಗೆ ವಿಶ್ವವನ್ನು ಸುರಕ್ಷಿತ, ಆಹ್ಲಾದಕರ ಹಾಗೂ ಸುಖಮಯವನ್ನಾಗಿಸುವಂತೆ ಅಭಿವೃದ್ಧಿಯಾಗುವಂತಾದರೆ?
>
> (www.startupindia.gov.in ನಿಂದ ಆಯ್ದುಕೊಂಡಿದೆ)

**ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ** (Startup India Scheme)

ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯು, ದೇಶದಲ್ಲಿ ಆವಿಷ್ಕಾರ ಮತ್ತು ಸ್ಟಾರ್ಟ್‌ಅಪ್(ಹೊಸ ಕಂಪನಿ/ಸಂಸ್ಥೆ)ಗಳನ್ನು ಪೋಷಿಸುವುದಕ್ಕಾಗಿ ಒಂದು ಭದ್ರವಾದ ಪರಿಸರ ವ್ಯವಸ್ಥೆಯನ್ನು ಹೆಣೆಯುವ ಉದ್ದೇಶದೊಂದಿಗಿನ ಭಾರತ ಸರ್ಕಾರದ ಮುಂಚೂಣಿಯ ಮುಂತೊಡಗುವಿಕೆಯಾಗಿದೆ. ಈ ನಡೆಯು ಸುಸ್ಥಿರ ಆರ್ಥಿಕ ಬೆಳವಣಿಗೆಯತ್ತ ಕೊಂಡೊಯ್ಯುವುದರೊಂದಿಗೆ ಬೃಹತ್ ಪ್ರಮಾಣದ ಉದ್ಯೋಗ ಅವಕಾಶಗಳನ್ನು ಸೃಜಿಸುತ್ತದೆ. ಭಾರತ ಸರ್ಕಾರವು ಆವಿಷ್ಕಾರ ಮತ್ತು ವಿನ್ಯಾಸಗಳ ಮೂಲಕ ಬೆಳೆಯುವತ್ತ ಸ್ಟಾರ್ಟ್‌ಅಪ್‌ಗಳನ್ನು ಸಶಕ್ತಗೊಳಿಸುವ ಗುರಿ ಹೊಂದಿದೆ. ಈ ಯೋಜನೆಯು ವಿಶೇಷವಾಗಿ ಈ ಮುಂದಿನ ಗುರಿಗಳನ್ನು ಹೊಂದಿದೆ:

1. ಉದ್ಯಮಶೀಲತಾ ಸಂಸ್ಕೃತಿಯನ್ನು ಹುಟ್ಟು ಹಾಕುವುದು ಮತ್ತು ಸಮಾಜದಲ್ಲಿ ದೊಡ್ಡ ಮಟ್ಟದಲ್ಲಿ ಉದ್ಯಮಶೀಲತೆಯು ಮೌಲ್ಯಗಳನ್ನು ಅಳವಡಿಸುವುದು ಹಾಗೂ ಉದ್ಯಮಶೀಲತೆಯ ಬಗೆಗಿನ ಜನರ ಮನೋಧರ್ಮವನ್ನು ಪ್ರಭಾವಿಸುವುದು.

2. ಒಬ್ಬ ಉದ್ಯಮಸಾಹಸಿಯಾಗುವ ಮತ್ತು ಉದ್ಯಮಶೀಲತೆಯ ಪ್ರಕ್ರಿಯೆಗಳ ಸೊಗಸಿನ ಬಗೆಗೆ ಅರಿವನ್ನು, ವಿಶೇಷವಾಗಿ ಯುವ ಪೀಳಿಗೆಯಲ್ಲಿ ಮೂಡಿಸುವುದು.

3. ವಿದ್ಯಾವಂತ ಯುವಜನತೆ, ವಿಜ್ಞಾನಿಗಳು ಮತ್ತು ತಂತ್ರಜ್ಞರನ್ನು ಉದ್ಯಮಶೀಲತೆಯು ಒಂದು ಲಾಭದಾಯಕ, ಪ್ರಾಶಸ್ತ್ಯ ನೀಡಬಹುದಾದ ಮತ್ತು ಕಾರ್ಯಸಾಧ್ಯವಾದ ವೃತ್ತಿಜೀವನವೆಂದು ಪರಿಗಣಿಸುವಂತೆ ಮಾಡಲು ಪ್ರೇರೇಪಿಸುವ ಮೂಲಕ ಹೆಚ್ಚು ಚಲನಶೀಲ ಸ್ಟಾರ್ಟ್ ಅಪ್‌ಗಳನ್ನು ಪ್ರೋತ್ಸಾಹಿಸುವುದು.

4. ಆರಂಭಪೂರ್ವ, ಹೊಸ ಹಾಗೂ ಆರಂಭೋತ್ತರ ಪ್ರಾರಂಭದ ಹಂತಗಳನ್ನು ಒಳಗೊಂಡಂತೆ ಉದ್ಯಮಶೀಲತೆ ಅಭಿವೃದ್ಧಿಯ ಆರಂಭಿಕ ಹಂತವನ್ನು ಮತ್ತು ಬೆಳವಣಿಗೆಯ ಉದ್ದಿಮೆಗಳನ್ನು ಬೆಂಬಲಿಸುವುದು.

5. ಜನಸಂಖ್ಯಾ ಪಿರಮಿಡ್‌ನ ಕೆಳಹಂತದಲ್ಲಿರುವ ಜನರ ಅಗತ್ಯಗಳನ್ನು ಈಡೇರಿಸುವುದಕ್ಕಾಗಿ ಒಳಗೊಳ್ಳುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಗಳನ್ನು ಸಾಧಿಸಲು, ಅಲ್ಪ ಪ್ರಾತಿನಿಧಿಕ ಉದ್ದೇಶಿತ ಗುಂಪುಗಳಾದ ಮಹಿಳೆಯರು, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳು; ಅಲ್ಪ ಪ್ರಾತಿನಿಧಿಕ ಪ್ರದೇಶಗಳ ನಿರ್ದಿಷ್ಟ ಅಗತ್ಯಗಳನ್ನು ಈಡೇರಿಸುವ ಮೂಲಕ ಉದ್ಯಮ ಶೀಲತೆಯ ಪೂರೈಕೆಗೆ ವಿಶಾಲ ತಳಹದಿಯನ್ನು ಹಾಕುವುದು.

ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯವು ಜಾರಿಮಾಡಿರುವ ದಿನಾಂಕ 17 ಫೆಬ್ರವರಿ, 2017ರ ಅಧಿಸೂಚನೆಯ ಪ್ರಕಾರ ಸ್ಟಾರ್ಟ್‌ಅಪ್ ಎಂದರೆ:

1. ಭಾರತದಲ್ಲಿ ನೋಂದಾಯಿಸಲ್ಪಟ್ಟ ಅಥವಾ ಸಂಯೋಜಿಸಲ್ಪಟ್ಟಿರುವ
2. ಐದು ವರ್ಷಗಳಿಗಿಂತ ಹಳೆಯದಲ್ಲದ
3. ಕಳೆದ ಯಾವುದೇ ವರ್ಷದಲ್ಲಿ ವಾರ್ಷಿಕ ವಹಿವಾಟು 25 ಕೋಟಿ ರೂ.ಗಳನ್ನು ಮೀರದಿರುವ
4. ತಂತ್ರಜ್ಞಾನ ಅಥವಾ IPR(Intellectual Property Rights)ಗಳು ಮತ್ತು ಸ್ವಾಮ್ಯ ಹಕ್ಕುಗಳಿಂದ ಪ್ರೇರಿತವಾದ ಉತ್ಪನ್ನಗಳು/ಸೇವೆ/ಪ್ರಕ್ರಿಯೆಗಳ ಆವಿಷ್ಕಾರ, ಅಭಿವೃದ್ಧಿ ಅಥವಾ ವಾಣಿಜ್ಯೀಕರಣಗಳತ್ತ ಕಾರ್ಯ ನಿರ್ವಹಿಸುವ ಕಂಪನಿಯಾಗಿದೆ.

**ಸ್ಟಾರ್ಟ್‌ಅಪ್ ಇಂಡಿಯಾ ಮುಂತೊಡಗುವಿಕೆ: ಕ್ರಿಯಾ ಅಂಶಗಳು** (Startup India Initiative: Action Points)

1. **ಸರಳೀಕರಣ ಮತ್ತು ಕೈಗೆಟಕುವಂತಿರುವುದು** (Simplification and Handholding): ಸ್ಟಾರ್ಟ್‌ಅಪ್‌ಗಳ ಅನುಸರಣೆಯನ್ನು ಸ್ನೇಹೀ ಮತ್ತು ನಮ್ಯವಾಗಿಸಲು ಸರಳೀಕರಣಗಳನ್ನು ಘೋಷಿಸಲಾಗಿದೆ.
2. **ಸ್ಟಾರ್ಟ್‌ಅಪ್ ಇಂಡಿಯಾ ಹಬ್** (Startup India Hub): ಸಂಪೂರ್ಣ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗೆ ಸಂಪರ್ಕದ ಏಕಕೇಂದ್ರವನ್ನು ಸ್ಥಾಪಿಸುವುದು ಮತ್ತು ಜ್ಞಾನ ವಿನಿಮಯ ಹಾಗೂ ಹಣಕಾಸು ಒದಗಿಸಿಕೊಳ್ಳುವಿಕೆಗೆ ಪ್ರವೇಶಗಳನ್ನು ಸಾಧ್ಯವಾಗಿಸುವುದು.
3. **ಕಾನೂನಾತ್ಮಕ ಬೆಂಬಲ ಮತ್ತು ಶೀಘ್ರಗತಿಯ ಸ್ವಾಮ್ಯಹಕ್ಕು ಪರೀಕ್ಷೆ** (Legal support and Fasttracking patent examination): ಸ್ಟಾರ್ಟ್‌ಅಪ್ಸ್ ಬೌದ್ಧಿಕ ಆಸ್ತಿ ರಕ್ಷಣೆಗಳ (SIPP ï Startups Intellectual Property Protections) ಯೋಜನೆಯು ನವೀನ ಮತ್ತು ಆಸಕ್ತಿದಾಯಕ ಸ್ಟಾರ್ಟ್‌ಅಪ್‌ಗಳ ಸ್ವಾಮ್ಯಹಕ್ಕುಗಳು, ವ್ಯಾಪಾರೀ ಮುದ್ರೆಗಳು ಮತ್ತು ವಿನ್ಯಾಸಗಳ ಸಂರಕ್ಷಣೆಯನ್ನು ಒದಗಿಸುವುದೆಂದು ಊಹಿಸಲಾಗಿದೆ.

4. **ಸುಲಭ ನಿರ್ಗಮನ** (Easy Exit): ವ್ಯವಹಾರದ ವೈಫಲ್ಯ ಮತ್ತು ಕಾರ್ಯಾಚರಣೆಗಳ ವಿಸರ್ಜನೆ/ಮುಕ್ತಾಯದ ಸಂದರ್ಭದಲ್ಲಿ, ಬಂಡವಾಳ ಮತ್ತು ಸಂಪನ್ಮೂಲಗಳನ್ನು ಹೆಚ್ಚು ಲಾಭದಾಯಕ ಅವಕಾಶಗಳಿಗೆ ಪುನರ್ ಹಂಚಿಕೆ ಮಾಡುವ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಲಾಗುವುದು. ಇದು ಸಂಕೀರ್ಣ ಮತ್ತು ಸುದೀರ್ಘ ನಿರ್ಗಮನ ಪ್ರಕ್ರಿಯೆಗಳ ಭಯವಿಲ್ಲದೇ ಹೊಸ ಮತ್ತು ಆವಿಷ್ಕಾರೀ ಅಲೋಚನೆಗಳೊಂದಿಗೆ ಪ್ರಯೋಗಗಳನ್ನು ಪ್ರೋತ್ಸಾಹಿಸುತ್ತದೆ.
5. **ವಿಕಸನಕಾರ/ವಿಕಸನಾಲಯ ಸ್ಥಾಪನೆಗಾಗಿ ಖಾಸಗಿ ವಲಯವನ್ನು ಸಜ್ಜುಗೊಳಿಸುವುದು** (Harnessing private sector for incubator setup):ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟ/ನಿಧಿಪಡೆದ ವಿಕಸನಾಲಯಗಳ ವೃತ್ತಿಪರ ನಿರ್ವಹಣೆಯನ್ನು ಖಾತ್ರಿಪಡಿಸಿಕೊಳ್ಳಲು, ಸರ್ಕಾರವು ದೇಶದಾದ್ಯಂತ PPP ಮಾದರಿಯಲ್ಲಿ ವಿಕಸನಕಾರ/ವಿಕಸನಾಲಯಗಳನ್ನು ಸ್ಥಾಪಿಸಲು ನೋಡುತ್ತಿದೆ.
6. **ತೆರಿಗೆ ವಿನಾಯಿತಿ** (Tax Exemption): ಸ್ಟಾರ್ಟ್‌ಅಪ್ ಮುಂತೊಡಗುವಿಕೆಗಳ ಲಾಭವು ಮೂರು ವರ್ಷಗಳ ಅವಧಿಗೆ ಆದಾಯ ತೆರಿಗೆಯ ವಿನಾಯತಿ ಪಡೆಯುತ್ತದೆ.

**ಸ್ಟಾರ್ಟ್‌ಅಪ್ ಗೆ ಹಣಕಾಸು ಒದಗಿಸುವ ವಿಧಾನಗಳು** (Ways to fund Startup)

ಸ್ಟಾರ್ಟ್‌ಅಪ್ ಬಂಡವಾಳ ಮತ್ತು ಬ್ಯಾಂಕ್ ಸಾಲಗಳನ್ನು ನೀಡುವ ಸರ್ಕಾರಿ ಯೋಜನೆಗಳಲ್ಲದೇ, ಈ ಮುಂದಿನ ವಿಧಾನಗಳಲ್ಲೂ ಸಹ ಸ್ಟಾರ್ಟ್‌ಅಪ್ ಗಳಿಗೆ ಹಣಕಾಸನ್ನು ಪಡೆಯಬಹುದು.

1. **ಬೂಟ್ ಸ್ಟ್ರಾಪಿಂಗ್** (Boot Strapping): ಸಾಮಾನ್ಯವಾಗಿ ಸ್ವಂತ ಹಣಕಾಸನ್ನು ಒದಗಿಸುವುದೆಂದೇ ಜನಪ್ರಿಯವಾಗಿರುವ ಈ ವಿಧಾನವನ್ನು ಹಣಕಾಸು ಒದಗಿಸುವಿಕೆಯ ಪ್ರಥಮ ಆಯ್ಕೆ ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ, ನಿಮ್ಮ ವೈಯಕ್ತಿಕ ಉಳಿತಾಯ ಮತ್ತು ಸಂಪನ್ಮೂಲಗಳನ್ನು ಹೊರತೆಗೆದು, ನೀವು ವ್ಯವಹಾರದೊಂದಿಗೆ ಬೆಸೆಯಲ್ಪಡುವಿರಿ. ಅಲ್ಲದೇ, ನಂತರದ ಹಂತದಲ್ಲಿ, ಹೂಡಿಕೆದಾರರು ಅದನ್ನು ನಿಮ್ಮ ಅನುಕೂಲವೆಂದು ಪರಿಗಣಿಸುತ್ತಾರೆ. ಹೀಗಿದ್ದಾಗ್ಯೂ ಆರಂಭಿಕ ಹಣಕಾಸಿನ ಅಗತ್ಯವು ಅಲ್ಪ ಮತ್ತು ಮಿತ ಪ್ರಮಾಣದ್ದಿರುವಾಗ ಮಾತ್ರ ಇದೊಂದು ಹಣಕಾಸು ಒದಗಿಸುವ ಉತ್ತಮ ಆಯ್ಕೆಯಾಗಿದೆ.

2. **ಸಮೂಹ ಹಣಕಾಸು ಒದಗಿಸುವುದು** (Crowdfunding): ಇದು, ಜನರ ಸಮೂಹವು ಸಾಮಾನ್ಯ ಉದ್ದೇಶಕ್ಕಾಗಿ ಸಂಪನ್ಮೂಲಗಳನ್ನು ಸಂಗ್ರಹಿಸುವುದಾಗಿದೆ. ಇದು ಭಾರತಕ್ಕೆ ಹೊಸದೇನಲ್ಲ. ಹಣಕಾಸು ಒದಗಿಸಲು ಸಂಘಟನೆಗಳು ಜನಸಾಮಾನ್ಯರನ್ನು ತಲುಪುವ ಅನೇಕ ನಿದರ್ಶನಗಳಿವೆ. ಆದಾಗ್ಯೂ, ಸಮೂಹ ಹಣಕಾಸು ಒದಗಿಸುವುದನ್ನು ಉತ್ತೇಜಿಸುವ ವೇದಿಕೆಗಳ ಉದಯಿಸುವಿಕೆಯು ಭಾರತಕ್ಕೆ ಸಾಕಷ್ಟು ಹೊಸತಾಗಿದೆ. ಈ ವೇದಿಕೆಗಳು ಸ್ಟಾರ್ಟ್‌ಅಪ್‌ಗಳು ಅಥವಾ ಸಣ್ಣ ವ್ಯವಹಾರಗಳಿಗೆ ಅವುಗಳ ಹಣಕಾಸಿನ ಅವಶ್ಯಕತೆಗಳನ್ನು ಭರಿಸಲು ಸಹಾಯ ಮಾಡುತ್ತವೆ.

3. **ಉಪಕಾರಿ ಹೂಡಿಕೆ/ದೂತ ಹೂಡಿಕೆ** (Angel Investment): ಉಪಕಾರಿ ಹೂಡಿಕೆದಾರರೆಂದರೆ ಹೆಚ್ಚು ನಗದನ್ನು ಹೊಂದಿರುವ ಮತ್ತು ಉದಯೋನ್ಮುಖ ಹೊಸ ವ್ಯವಹಾರಗಳಲ್ಲಿ ಹಣ ಹೂಡಲು ಅತೀವ ಆಸಕ್ತಿ ಹೊಂದಿರುವವರು. ಅವರು ಬಂಡವಾಳದ ಜೊತೆಗೆ ಸಲಹೆಗಳನ್ನು ಸಹ ನೀಡುವರು.

4. **ಸಾಹಸಿ ಬಂಡವಾಳ** (Venture Capital): ಇದು ಅಪಾರ ಅವಕಾಶವುಳ್ಳ ಕಂಪನಿಗಳಲ್ಲಿ ತೊಡಗಿಸಲ್ಪಟ್ಟು ವೃತ್ತಿಪರತೆಯಿಂದ ನಿರ್ವಹಿಸಲ್ಪಡುವ ಹಣಕಾಸಾಗಿದೆ. ಸಾಹಸಿ ಹೂಡಿಕೆದಾರರು ಪರಿಣತಿ, ಸಲಹೆ ನೀಡುತ್ತಾರೆ ಮತ್ತು ಸುಸ್ಥಿರತೆ ಮತ್ತು ಮಾಪನ ಸಾಮರ್ಥ್ಯಗಳ ದೃಷ್ಟಿಯಿಂದ ವ್ಯವಹಾರವನ್ನು ಮಾಪನಮಾಡಿ, ವ್ಯವಹಾರ ಸಂಸ್ಥೆಯು ಎತ್ತ ಸಾಗುತ್ತಿದೆ ಎಂದರಿಯಲು ಲಿಟ್ಮಸ್ ಪರೀಕ್ಷೆಯ ಪಾತ್ರವಹಿಸುತ್ತಾರೆ.

5. **ವ್ಯವಹಾರ ವಿಕಸನಕಾರರು ಮತ್ತು ವೇಗವರ್ಧಕರು** (Business Incubators and Accelerators): ಇನ್ನೂ ಆರಂಭದ ಹಂತದ ವ್ಯವಹಾರವು ವಿಕಸನಕಾರ ಮತ್ತು ವೇಗವರ್ಧಕರ ಕಾರ್ಯಕ್ರಮಗಳನ್ನು ಹಣಕಾಸಿನ ಒಂದು ಆಯ್ಕೆಯಾಗಿ ಪರಿಗಣಿಸಬಹುದು. ಈ ಕಾರ್ಯಕ್ರಮಗಳು ಪ್ರತಿವರ್ಷ ನೂರಾರು ಸ್ಟಾರ್ಟ್‌ಅಪ್ ವ್ಯವಹಾರಗಳಿಗೆ ಸಹಾಯ ಒದಗಿಸುತ್ತವೆ. ಇವೆರಡನ್ನೂ ಪರಸ್ಪರ ಅದಲು–ಬದಲಾಗಿ ಬಳಸಲಾಗುತ್ತದೆ. ಆದಾಗ್ಯೂ, ವಿಕಸನಕಾರರು ಪೋಷಕರಂತಿದ್ದು ವ್ಯವಹಾರವನ್ನು (ಮಗುವಿನ ಹಾಗೆ) ಪೋಷಿಸಿದರೆ, ವೇಗವರ್ಧಕರು ವ್ಯವಹಾರವು ಮುಂದೋಡಲು ಅಥವಾ ಒಂದು ದೊಡ್ಡ ಹೆಜ್ಜೆಯನ್ನಿರಿಸಲು ಸಹಾಯ ಮಾಡುತ್ತಾರೆ. ವಿಕಸನಕಾರರು ಮತ್ತು ವೇಗವರ್ಧಕರು ಈ ವೇದಿಕೆಯನ್ನು ಬಳಸಿಕೊಂಡು ಸ್ಟಾರ್ಟ್‌ಅಪ್‌ಗಳನ್ನು ಸಲಹೆಗಾರರು, ಹೂಡಿಕೆದಾರರು ಮತ್ತು ಸಹ–ಸ್ಟಾರ್ಟ್‌ಅಪ್‌ಗಳೊಂದಿಗೆ ಸಮರ್ಥವಾಗಿ ಬೆಸೆಯುತ್ತಾರೆ.

6 **ಸೂಕ್ಷ್ಮ ಹಣಕಾಸು ಮತ್ತು ಬ್ಯಾಂಕಿಂಗೇತರ ಹಣಕಾಸು ನಿಗಮಗಳು** (Microfinance and NFBCs): ಸಾಂಪ್ರದಾಯಿಕ ಬ್ಯಾಂಕಿಂಗ್ ಸೇವೆಗಳಿಗೆ ಅವಕಾಶವಿಲ್ಲದವರು ಅಥವಾ ಬ್ಯಾಂಕ್ ಸಾಲಕ್ಕೆ ಅರ್ಹರಲ್ಲದವರಿಗೆ ಹಣಕಾಸಿನ ಸೇವೆಗಳಿಗೆ ಸೂಕ್ಷ್ಮ ಹಣಕಾಸು ಮೂಲತಃ ಅವಕಾಶವಾಗಿದೆ. ಅಂತೆಯೇ ಬ್ಯಾಂಕಿಂಗೇತರ ಹಣಕಾಸು ನಿಗಮ(Non Banking Financial Corporation)ಗಳು ಕಾನೂನಾತ್ಮಕ ಅಗತ್ಯವನ್ನಾಗಲೀ ಅಥವಾ ಬ್ಯಾಂಕೊಂದರ ವ್ಯಾಖ್ಯೆಯನ್ನಾಗಲೀ ಪೂರೈಸದೇ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತವೆ.

**ಬೌದ್ಧಿಕ ಆಸ್ತಿ ಹಕ್ಕುಗಳು** (Intellectual Property Rights ï IPR)

ಕಳೆದ ಎರಡು ದಶಕಗಳಿಂದ ಬೌದ್ಧಿಕ ಆಸ್ತಿ ಹಕ್ಕುಗಳು ಜಾಗತಿಕ ಅರ್ಥವ್ಯವಸ್ಥೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವಷ್ಟು ಎತ್ತರಕ್ಕೆ ಬೆಳೆದಿವೆ. ಬೌದ್ಧಿಕ ಆಸ್ತಿ ಎಲ್ಲೆಡೆಯೂ ಇದೆ. ಉದಾಹರಣೆಗೆ, ನೀವು ಕೇಳುವ ಸಂಗೀತ, ನಿಮ್ಮ ಫೋನ್ ಕೆಲಸ ಮಾಡುವ ತಂತ್ರಜ್ಞಾನ, ನಿಮ್ಮ ಶೂಗಳ ಮೇಲಿನ ಲೋಗೋ, ಇತ್ಯಾದಿ. ಅದು ನೀವು ನೋಡಬಲ್ಲ ಎಲ್ಲಾ ವಸ್ತುಗಳಲ್ಲೂ ಇರುತ್ತದೆ. ಆವಿಷ್ಕಾರಗಳು, ಪುಸ್ತಕಗಳು, ವರ್ಣಚಿತ್ರಗಳು, ಹಾಡುಗಳು, ಚಿಹ್ನೆಗಳು, ಹೆಸರುಗಳು,

ರೇಖಾಚಿತ್ರಗಳು ಅಥವಾ ವ್ಯವಹಾರದಲ್ಲಿ ಬಳಸುವ ವಿನ್ಯಾಸಗಳು, ಇತ್ಯಾದಿಗಳೆಲ್ಲವೂ ಮಾನವನ ಸೃಜನಶೀಲತೆ ಮತ್ತು ಕೌಶಲ್ಯಗಳ ಉತ್ಪನ್ನಗಳಾಗಿವೆ.

ಎಲ್ಲಾ ರಚನೆ/ಸೃಷ್ಟಿಗಳ ಆವಿಷ್ಕಾರಗಳೂ 'ಆಲೋಚನೆ'ಯೊಂದಿಗೆ ಆರಂಭವಾಗುತ್ತವೆ. ಒಮ್ಮೆ ಆಲೋಚನೆಯು ವಾಸ್ತವ ಉತ್ಪನ್ನ, ಅಂದರೆ, ಬೌದ್ಧಿಕ ಆಸ್ತಿಯಾಯಿತೆಂದರೆ, ಅದರ ನಿರ್ಮಾತೃವು ಭಾರತ ಸರ್ಕಾರದಡಿಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿಮಾಡಿಕೊಳ್ಳಬಹುದು.

ಇಂತಹ ಉತ್ಪನ್ನಗಳ ಮೇಲೆ ನೀಡಲಾದ ಕಾನೂನುಬದ್ಧ ಹಕ್ಕುಗಳನ್ನೆ ಬೌದ್ಧಿಕ ಆಸ್ತಿ ಹಕ್ಕುಗಳು– IPR ಎನ್ನಲಾಗುತ್ತದೆ. ಆದ್ದರಿಂದ ಬೌದ್ಧಿಕ ಆಸ್ತಿ ಎಂದರೆ ಮಾನವನ ಮನಸ್ಸಿನ ಉತ್ಪನ್ನಗಳು. ಆದಕಾರಣ, ಇತರ ಪ್ರಕಾರದ ಆಸ್ತಿಗಳಂತೆ, ಬೌದ್ಧಿಕ ಆಸ್ತಿಯ ಮಾಲೀಕರು ಅದನ್ನು ಇತರರಿಗೆ ಬಾಡಿಗೆಗೆ ಕೊಡುವುದಾಗಲೀ, ನೀಡುವುದಾಗಲೀ ಅಥವಾ ಮಾರುವುದಾಗಲೀ ಮಾಡಬಹುದು.

**ಉತ್ಪನ್ನ ಸ್ವಾಮ್ಯ ಮತ್ತು ಗ್ರಂಥ ಸ್ವಾಮ್ಯ ಹಕ್ಕು – ಯಶಸ್ಸಿನ ಕಥೆ** (Patent and copyright ï Success Story)

1. ಮೈಕೆಲ್ ಜಾಕ್ಸನ್ ಮತ್ತು ಇಬ್ಬರು ಸಹ–ಶೋಧಕರು, ವೇದಿಕೆಯ ಕೆಳಭಾಗದಲ್ಲಿ ಮರೆಯಾಗಿಸಿಟ್ಟ ಸಾಧನವೊಂದರೊಳಗೆ ಸಿಕ್ಕಿಕೊಳ್ಳುವಂತಹ ಶೂಗಳ ಜೋಡಿಯೊಂದಕ್ಕೆ ಸ್ವಾಮ್ಯ ಹಕ್ಕು ಪಡೆದರು. ಅದಕ್ಕೆ ôMethod and Means for creating anti gravity illusionô ಎಂದು ಶೀರ್ಷಿಕೆ ಕೊಟ್ಟರು. 'Smooth Criminalô ಹಾಡಿನಲ್ಲಿ ವಿಶೇಷ ಪರಿಣಾಮವನ್ನು ಸಾಧಿಸಲು ಈ ಶೂಗಳು ಸಹಾಯ ಮಾಡಿದವು.

ಮೂಲ:Mental Floss

2 ಜೆ.ಕೆ. ರೌಲಿಂಗ್ ತನ್ನ ಮೊದಲ ಹ್ಯಾರೀ ಪಾಟರ್ ಪುಸ್ತಕವನ್ನು ಬರೆದಾಗ, ಆಕೆ ಬಡವಳಾಗಿದ್ದರೂ ಸಹ ತನ್ನ ಪುಸ್ತಕದ ಮೇಲೆ ಗ್ರಂಥ ಸ್ವಾಮ್ಯವನ್ನು ಹೊಂದಿದಳು. ಆದ್ದರಿಂದ ಅವಳ ಪುಸ್ತಕದ ಪ್ರತಿಗಳನ್ನು ಮುದ್ರಿಸಿ ಮಾರುವ ವ್ಯಕ್ತಿ ಆಕೆಯೊಬ್ಬಳೇ ಆಗಿದ್ದಳು. ಖಂಡಿತವಾಗಿ, ಆಕೆ ತಾನೊಬ್ಬಳೇ ಇದನ್ನು ಮಾಡಲಿಲ್ಲ. ಬದಲಿಗೆ, ಒಂದು ಪ್ರಕಾಶನ ಸಂಸ್ಥೆಗೆ ಪ್ರತಿಫಲ ಪಾವತಿಯನ್ನು ಪಡೆದು ಅನುಮತಿ ಕೊಟ್ಟಳು. ಕೇವಲ ಪದಗಳ ಮೇಲಿರುವ ಗ್ರಂಥಸ್ವಾಮ್ಯ ಹಕ್ಕು ಮಾತ್ರವಲ್ಲದೇ ಕಥೆ ಮತ್ತು ಪಾತ್ರಗಳಿಗೂ ಆಕೆ ಗ್ರಂಥಸ್ವಾಮ್ಯವನ್ನು ತನ್ನಾದಾಗಿಸಿಕೊಂಡಳು. ಹಾಗಾಗಿ, ಅವಳ ಗ್ರಂಥಸ್ವಾಮ್ಯ ಹಕ್ಕುಗಳ ಪ್ರಕಾರ, ಅವಳ ಕಥೆಯನ್ನು ಚಲನಚಿತ್ರವಾಗಿ ನಿರ್ಮಾಣಮಾಡಿ ಮಾರುವ ಹಕ್ಕು ಕೂಡಾ ಕೇವಲ ಅವಳೊಬ್ಬಳಿಗೇ ಸೇರಿತ್ತು. ಪುನಃ ಆಕೆ ಇದನ್ನೂ ಸಹ ತಾನೊಬ್ಬಳೇ ಮಾಡಲಿಲ್ಲ. ಬದಲಿಗೆ, ಒಂದು ಚಲನಚಿತ್ರ ನಿರ್ಮಾಣ ಕಂಪನಿಗೆ ಚಲನಚಿತ್ರ ನಿರ್ಮಿಸಿ ಮಾರಲು ಪ್ರತಿಫಲವನ್ನು ಪಡೆದು ಅನುಮತಿ ನೀಡಿದಳು. ಗ್ರಂಥಸ್ವಾಮ್ಯ ಹಕ್ಕಿಲ್ಲದಿದ್ದರೆ ಆ ಪುಸ್ತಕ ಪ್ರಕಾಶನಗೊಳ್ಳುತ್ತಿದ್ದಂತೆಯೇ ಯಾರಾದರೂ ಪುಸ್ತಕದ ಪ್ರತಿಗಳನ್ನು ಮುದ್ರಣ ಮಾಡಬಹುದಾಗಿತ್ತು.

ಅಂತೆಯೇ ಯಾರಾದರೂ ಚಲನಚಿತ್ರವನ್ನು ನಕಲು ಮಾಡಬಹುದಾಗಿತ್ತು. ಅಥವಾ ಸಿನಿಮಾಗಳಲ್ಲಿ ಪ್ರದರ್ಶಿಸಬಹುದಿತ್ತು. ಲೇಖಕನಿಗೆ ಲಾಭ ನೀಡದೇ ಆ ಜನರು ಈ ಕಥೆಯಿಂದ ಹಣ ಮಾಡಿಕೊಳ್ಳಬಹುದಾಗಿತ್ತು.

**ಮೂಲ:** ಬೌದ್ಧಿಕ ಆಸ್ತಿಗಳ ನಿಮ್ಮದೇ ಪ್ರಪಂಚ–ಜಾಗತಿಕ ಬೌದ್ಧಿಕ ಆಸ್ತಿ ಸಂಸ್ಥೆ

ನಿರ್ದಿಷ್ಟವಾಗಿ ಬೌದ್ಧಿಕ ಆಸ್ತಿಯು ವ್ಯವಹಾರದಲ್ಲಿ ಬಳಸಲ್ಪಡುವ ಮಾನವ ಮನಸ್ಸಿನ ಸೃಷ್ಟಿಗಳಾದ ಆವಿಷ್ಕಾರಗಳು, ಸಾಹಿತ್ಯಕ ಮತ್ತು ಕಲಾತ್ಮಕ ಕೃತಿಗಳು, ಚಿಹ್ನೆಗಳು, ಹೆಸರುಗಳು, ಚಿತ್ರಗಳು ಮತ್ತು ವಿನ್ಯಾಸಗಳು. IP ಗಳನ್ನು ಎರಡು ವಿಶಾಲ ಸಮೂಹಗಳಾಗಿ ವಿಭಾಗಿಸಲಾಗಿದೆ: ಆವಿಷ್ಕಾರಗಳು (ಉತ್ಪನ್ನಸ್ವಾಮ್ಯ ಹಕ್ಕುಗಳು), ವ್ಯಾಪಾರೀ ಮುದ್ರೆಗಳು, ಕೈಗಾರಿಕಾ ವಿನ್ಯಾಸಗಳು ಮತ್ತು ಭೌಗೋಳಿಕ ಸಂಕೇತಗಳನ್ನು ಒಳಗೊಳ್ಳುವ ಕೈಗಾರಿಕಾ ಆಸ್ತಿ ಹಾಗೂ ಕಾದಂಬರಿಗಳು, ಕವನಗಳು, ನಾಟಕಗಳು, ಚಲನಚಿತ್ರಗಳು, ಸಂಗೀತ ಕೃತಿಗಳು, ಕಲಾತ್ಮಕ ಕೃತಿಗಳಾದ ರೇಖಾಚಿತ್ರಗಳು, ವರ್ಣಚಿತ್ರಗಳು, ಫೋಟೋಗ್ರಾಫ್‌ಗಳು ಮತ್ತು ಕೆತ್ತನೆ ಹಾಗೂ ವಾಸ್ತು ವಿನ್ಯಾಸಗಳನ್ನು ಒಳಗೊಳ್ಳುವ ಸಾಹಿತ್ಯಕ ಮತ್ತು ಕಲಾತ್ಮಕ ಕೃತಿಗಳು.

ಬೌದ್ಧಿಕ ಆಸ್ತಿ ಮತ್ತು ಇತರ ರೂಪಗಳ ಆಸ್ತಿಗಳಿಗಿರುವ ಗಮನಾರ್ಹ ವ್ಯತ್ಯಾಸವೆಂದರೆ, ಬೌದ್ಧಿಕ ಆಸ್ತಿಯು ಅಗೋಚರ ಅಂದರೆ, ಅದನ್ನು ಭೌತಿಕ ಅಂಶಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನ ಮಾಡುವುದಾಗಲೀ, ಗುರುತಿಸುವುದಾಗಲೀ ಸಾಧ್ಯವಾಗುವುದಿಲ್ಲ. ಬೌದ್ಧಿಕ ಆಸ್ತಿಯ ವ್ಯಾಪ್ತಿ ಮತ್ತು ವ್ಯಾಖ್ಯೆಯು ನಿರಂತರವಾಗಿ ಹೊಸ ರೂಪಗಳ ಒಳಗೊಳ್ಳುವಿಕೆಯಿಂದ ಬದಲಾಗುತ್ತಲೇ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಭೌಗೋಳಿಕ ಸಂಕೇತಗಳು, ಸಸ್ಯ ಪ್ರಭೇದಗಳ ಸಂರಕ್ಷಣೆ, ಅರೆವಾಹಕಗಳು (ಸೆಮಿ ಕಂಡಕ್ಟರ್ಸ್) ಮತ್ತು ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳು ಹಾಗೂ ಬಹಿರಂಗಗೊಳಿಸದ ಮಾಹಿತಿಗಳೆಲ್ಲವನ್ನೂ ಬೌದ್ಧಿಕ ಆಸ್ತಿಯ ವ್ಯಾಪ್ತಿಯಡಿಯಲ್ಲಿ ತರಲಾಗಿದೆ.

**ಭೌಗೋಳಿಕ ಸಂಕೇತ: ಸಾಮಾಜಿಕ ಮತ್ತು ಆರ್ಥಿಕ ಪ್ರಭಾವ**

(Geographical Indication: Social and Economic Impact)

ಭೌಗೋಳಿಕ ಸಂಕೇತಗಳು (GI) ನಮ್ಮ ಸಾಮೂಹಿಕ ಮತ್ತು ಬೌದ್ಧಿಕ ಸಂಸ್ಕೃತಿಯಾಗಿದ್ದು, ಅವುಗಳನ್ನು ಸಂರಕ್ಷಿಸಬೇಕು ಮತ್ತು ಉತ್ತೇಜಿಸಬೇಕು. GI ಗಳೆಂದು ಸಂರಕ್ಷಿಸಲಾದ ಮತ್ತು ನೋಂದಾಯಿತವಾದ ಸರಕುಗಳನ್ನು ಕೃಷಿ ಉತ್ಪನ್ನಗಳು, ಕರಕುಶಲ ಉತ್ಪನ್ನಗಳು, ಉತ್ಪಾದಿತ ಸರಕುಗಳು ಮತ್ತು ಜವಳಿ–ಎಂದು ವರ್ಗೀಕರಿಸಲಾಗಿದೆ. ಡಾರ್ಜಲಿಂಗ್ ಚಹಾ, ಕಂಗ್ರಾದ ಬಾಸೋಲಿ ವರ್ಣಚಿತ್ರಗಳು, ನಾಗಪುರದ ಕಿತ್ತಳೆ, ಬನಾರಸ್ ಬ್ರೋಕೇಡ್ಸ್ ಮತ್ತು ಸೀರೆಗಳು, ಕಾಶ್ಮೀರದ ಪಶ್ಮೀನಾಗಳು GIನ ಕೆಲವು ಉದಾಹರಣೆಗಳಾಗಿವೆ. ಹೆಚ್ಚುಪಾಲು GI ಉತ್ಪನ್ನಗಳನ್ನು ಗ್ರಾಮೀಣ ಸಮುದಾಯದವರು ತಯಾರಿಸಿರುವುದಾಗಿವೆ. ಆದ್ದರಿಂದ, ನಮ್ಮ ಗ್ರಾಮೀಣ ಕುಶಲಕರ್ಮಿಗಳು, ನೇಕಾರರು, ಕಲಾಕಾರರು ಮತ್ತು ಕೃಷಿಕರಿಗೆ ಆದಾಯ ತರುವಂಥದ್ದಾಗಿವೆ. GIಗಳ ಮಾರಾಟ ಪ್ರಕ್ರಿಯೆಯು ಉತ್ಪನ್ನಗಳ ಸುತ್ತ ಒಂದು ಪೂರೈಕೆಯ ಸರಪಳಿಯನ್ನು ನಿರ್ಮಿಸುವುದಲ್ಲದೇ, ಪ್ರತಿಯಾಗಿ ಆಯಾ GI ಉತ್ಪನ್ನಕ್ಕೆ ಹೆಚ್ಚು ಬೆಲೆಯನ್ನು ನೀಡುತ್ತದೆ. ಇದು, ಆ ಉತ್ಪನ್ನವನ್ನು ಆಧರಿಸಿದ ಸಾಂಪ್ರದಾಯಿಕ ರೂಢಿಗಳನ್ನು ಸಂರಕ್ಷಿಸುತ್ತದೆಯಲ್ಲದೇ, ಆ ಉತ್ಪನ್ನದ ಮೂಲಸ್ಥಳದಲ್ಲಿ ಉದ್ಯಮಶೀಲತೆ ಮತ್ತು ಪ್ರವಾಸೋದ್ಯಮಗಳನ್ನು ಪ್ರೋತ್ಸಾಹಿಸುತ್ತದೆ.

| |
|---|
| ಡಾರ್ಜಲಿಂಗ್ ಚಹಾವು 2004ರಲ್ಲಿ GI ಸಂರಕ್ಷಣೆ ಪಡೆದ ಮೊದಲ ಭಾರತೀಯ ಉತ್ಪನ್ನವಾಗಿದೆ. ಪಶ್ಚಿಮ ಬಂಗಾಳದ ಡಾರ್ಜಲಿಂಗ್ ಜಿಲ್ಲೆಯಲ್ಲಿ ಪ್ರತಿವರ್ಷ 10 ಮಿಲಿಯನ್ ಕೆ.ಜಿ.ಗಳಷ್ಟು ಚಹಾ ಬೆಳೆವ 87 ಚಹಾ ತೋಟಗಳಿವೆ. ಯೂರೋಪಿಯನ್ ಯೂನಿಯನ್ ಡಾರ್ಜಲಿಂಗ್ ಚಹಾ ರಫ್ತುಗಳ ಶೇಕಡಾ 60 ಪಾಲನ್ನು ಹೊಂದಿದೆ. |

**IPR ಏಕೆ ಮುಖ್ಯವಾಗಿದೆ?**

1. ಅದು, ಕ್ಯಾನ್ಸರ್ ವಾಸಿಮಾಡುವ ಔಷಧಗಳನ್ನು ತಯಾರಿಸುವಂತಹ ಹೊಸ, ದಿಕ್ಕನ್ನೇ ಬದಲಿಸಬಲ್ಲ ಆವಿಷ್ಕಾರಗಳನ್ನು ಪ್ರೋತ್ಸಾಹಿಸುತ್ತದೆ.
2. ಅದು ಆವಿಷ್ಕಾರಗಳು, ಲೇಖಕರು, ತಯಾರಕರನ್ನು ಅವರ ಕಾರ್ಯಕ್ಕಾಗಿ ಪ್ರೋತ್ಸಾಹಿಸುತ್ತದೆ.
3. ಅದು ವ್ಯಕ್ತಿಯೊಬ್ಬ ತಯಾರಿಸಿದ ಕೃತಿಯನ್ನು ಸಾರ್ವಜನಿಕರಿಗೆ ಹಂಚುವುದು ಮತ್ತು ತಿಳಿಸುವುದನ್ನು ಅವನ/ಅವಳ ಅನುಮತಿಯಿಂದ ಮಾತ್ರ ಮಾಡುವುದಕ್ಕೆ ಅನುವು ಮಾಡಿಕೊಡುತ್ತದೆ.
4. ಅದು ಲೇಖಕರು, ತಯಾರಕರು, ಅಭಿವೃದ್ಧಿಪಡಿಸುವವರು ಮತ್ತು ಮಾಲೀಕರು ತಮ್ಮ ಕಾರ್ಯಗಳಿಗೆ ಮನ್ನಣೆ ಪಡೆಯಲು ಸಹಾಯ ಮಾಡುತ್ತದೆ.

ಜಾಗತಿಕ ವ್ಯಾಪಾರ ಸಂಘಟನೆ (WTO)ದ ಸ್ಥಾಪನೆಯೊಂದಿಗೆ ಬೌದ್ಧಿಕ ಆಸ್ತಿ ಸಂರಕ್ಷಣೆಯ ಮಹತ್ವ ಮತ್ತು ಪಾತ್ರವನ್ನು ವ್ಯಾಪಾರೀ ಸಂಬಂಧಿತ ಬೌದ್ಧಿಕ ಆಸ್ತಿ ವ್ಯವಸ್ಥೆಗಳ (Trade Related Intellectual Property Systems - TRIPS) ಒಪ್ಪಂದದಲ್ಲಿ ಬಿಗಿಗೊಳಿಸಲಾಗಿದೆ. WTO ದ ಸ್ಥಾಪನೆಯೊಂದಿಗೆ, ಜೊತೆಗೆ TRIPS ಒಪ್ಪಂದಕ್ಕೆ ಭಾರತವು ಸಹಿ ಹಾಕಿರುವ ಕಾರಣ, ಅಂತರರಾಷ್ಟ್ರೀಯ ಔಚಿತ್ಯಗಳನ್ನು ಪಾಲಿಸುವುದಕ್ಕಾಗಿ ಬೌದ್ಧಿಕ ಆಸ್ತಿ ಹಕ್ಕುಗಳ ಸಂರಕ್ಷಣೆಗಾಗಿ ಹಲವಾರು ಶಾಸನಗಳನ್ನು ಜಾರಿಗೊಳಿಸಲಾಯಿತು. ಅವುಗಳಲ್ಲಿ, ವ್ಯಾಪಾರೀ ಮುದ್ರೆ ಕಾಯ್ದೆ 1999, ಭೌಗೋಳಿಕ ಸಂಕೇತಗಳ (ನೋಂದಣಿ ಮತ್ತು ಸಂರಕ್ಷಣೆ) ಕಾಯ್ದೆ 1999, ವಿನ್ಯಾಸಗಳ ಕಾಯ್ದೆ 2000 ಮತ್ತು ಸಸ್ಯ ಪ್ರಭೇದಗಳ ಸಂರಕ್ಷಣೆ ಹಾಗೂ ಬೇಸಾಯಗಾರರ ಹಕ್ಕುಗಳ ಕಾಯ್ದೆ 2001, ಸ್ವಾಮ್ಯಹಕ್ಕುಗಳ ಕಾಯ್ದೆ 2005 ಮತ್ತು ಗ್ರಂಥಸ್ವಾಮ್ಯ ಹಕ್ಕು (ತಿದ್ದುಪಡಿ) ಕಾಯ್ದೆ 2012 ಗಳು ಒಳಗೊಂಡಿವೆ.

ಈ ಮುಂದಿನ ಕೋಷ್ಟಕವು ಭಾರತದಲ್ಲಿ ಜಾರಿಗೊಂಡ ಈ ಕಾಯ್ದೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ.

| IPR ಪ್ರಕಾರಗಳು | ಮಾನವ ತಯಾರಿಕೆಯ ಪ್ರಕಾರ | ಕಾನೂನು | ಮುಖ್ಯ ಅಗತ್ಯಗಳು | ಸಂರಕ್ಷಣೆಯ ಅವಧಿ |
|---|---|---|---|---|
| ಸ್ವಾಮ್ಯ ಹಕ್ಕು (Patent) | ಆವಿಷ್ಕಾರಗಳು * ತಯಾರಿಸಬಹುದಾದ ಅಥವಾ ಕೈಗಾರಿಕೆಯಲ್ಲಿ ಬಳಸುವಂತಹ ಒಂದು ಹೊಸ ಮತ್ತು ವಿನೂತನ ಉತ್ಪನ್ನ ಅಥವಾ ಪ್ರಕ್ರಿಯೆ | ಸ್ವಾಮ್ಯಹಕ್ಕು ಕಾಯ್ದೆ 1970 | ಹೊಸದಾದ ಉತ್ಪನ್ನ ಅಥವಾ ಪ್ರಕ್ರಿಯೆ ಆವಿಷ್ಕಾರೀ ಹೆಜ್ಜೆಯಾಗಿದ್ದು ಕೈಗಾರಿಕಾ ಅನ್ವಯಿಕೆ ಹೊಂದಿರುವುದು | ಸಲ್ಲಿಸಿದ ದಿನಾಂಕದಿಂದ ವಾರ್ಷಿಕ ನವೀಕರಣ ಶುಲ್ಕ ಪಾವತಿಗೊಳಪಟ್ಟು ಇಪ್ಪತ್ತು ವರ್ಷಗಳು. 20 ವರ್ಷಗಳ ನಂತರ |

| | | | | |
|---|---|---|---|---|
| | | | | ಯಾವುದೇ ವಿಸ್ತರಣೆ ಇಲ್ಲ. |
| ವಿನ್ಯಾಸ (Design) | ಉತ್ಪನ್ನದ ಸೌಂದರ್ಯ/ಅಂದ ಅಥವಾ ನೋಟ ಮತ್ತು ಅನುಭವ. ಕಣ್ಸೆಳೆಯುವ ಕಾರ್ಯಾತ್ಮಕವಲ್ಲದ ಲಕ್ಷಣಗಳು | ವಿನ್ಯಾಸದ ಕಾಯ್ದೆ 2000 | ಹಿಂದೆಂದೂ ಬಳಸಿರದ ಹೊಸ ಮತ್ತು ಮೂಲ ಲಕ್ಷಣಗಳು | ಸಲ್ಲಿಸಿದ ದಿನಾಂಕದಿಂದ ಹತ್ತು ವರ್ಷಗಳು. ಮುಂದಿನ (15 ವರ್ಷಗಳ ಗರಿಷ್ಠ ಸಂರಕ್ಷಣೆ) 5 ವರ್ಷಗಳಿಗೆ ನವೀಕರಿಸಬಹುದಾಗಿದೆ. |
| ವ್ಯಾಪಾರಿ ಮುದ್ರೆ (Trade mark) | ಒಬ್ಬ ವ್ಯಕ್ತಿ ಅಥವಾ ಕಂಪನಿಯೊಂದು ತಯಾರಿಸಿದ ಸರಕುಗಳು ಅಥವಾ ನೀಡುವ ಸೇವೆಗಳನ್ನು ಗುರುತಿಸಲು ಅನುವು ಮಾಡಿಕೊಡುವ ಯಾವುದೇ ಪದ, ಹೆಸರು, ಚಿಹ್ನೆ, ಆಕಾರ ಅಥವಾ ಲೋಗೋ.<br>* ನಿಮ್ಮನ್ನು ಗುರುತಿಸುವಿಕೆಯ ಮುಖ್ಯಭಾಗವೇ ನಿಮ್ಮ ಹೆಸರಿರುವಂತೆ, ಬಳಸುವ ಸರಕುಗಳು ಅಥವಾ ಸೇವೆಗಳ ಗುರುತಿಸುವಿಕೆಯನ್ನು ವ್ಯಾಪಾರೀ ಮುದ್ರೆಯು ವ್ಯಾಖ್ಯಾನಿಸುತ್ತದೆ. | ವ್ಯಾಪಾರಿ ಮುದ್ರೆ ಕಾಯ್ದೆ 1999 | ಅಪೂರ್ವ ಮತ್ತು ವಿಶಿಷ್ಟ ಪದ, ಹೆಸರು ಅಥವಾ ಚಿಹ್ನೆ (ಅಥವಾ ಅವುಗಳ ಸಂಯೋಜನೆ) | ಸಲ್ಲಿಸಿದಂದಿನಿಂದ ಹತ್ತು ವರ್ಷಗಳು ಸತತ 10 ವರ್ಷ ಅವಧಿಗೆ ನವೀಕರಿಸಬಹುದಾಗಿದೆ. |
| ಗ್ರಂಥಸ್ವಾಮ್ಯ ಹಕ್ಕು (Copyright) | ಪುಸ್ತಕಗಳು, ಬ್ಲಾಗ್‌ಗಳು, ಫೋಟೋಗ್ರಾಫ್‌ಗಳು, ಹಾಡುಗಳು, ಸಂಗೀತ, ನಾಟಕಗಳು, ಇತ್ಯಾದಿ ಕಲಾತ್ಮಕ, ಸಾಹಿತ್ಯಕ ಮತ್ತು ಸಂಗೀತದ ಕೃತಿಗಳು | ಗ್ರಂಥಸ್ವಾಮ್ಯ ಹಕ್ಕು ಕಾಯ್ದೆ 1975 | ಯಾವುದೇ ಮೂಲ ಆಲೋಚನೆಯು ಗುಣಮಟ್ಟ ಅಥವಾ ಉದ್ದೇಶಗಳನ್ನು ಹೊರತುಪಡಿಸಿ, ಗ್ರಾಹ್ಯ ರೂಪದಲ್ಲಿ | ಸಾಹಿತ್ಯಕ, ನಾಟಕೀಯ, ಸಂಗೀತಮಯ ಅಥವಾ ಕಲಾತ್ಮಕ ಕೃತಿಗಳು– ಲೇಖಕ/ಕರ್ತೃವಿನ ಜೀವನಪರ್ಯಂತದಿಂದ ಅವನ/ಅವಳ |

| | | | | |
|---|---|---|---|---|
| | * ನೀವು ಫೋಟೊ ಒಂದನ್ನು ಕ್ಲಿಕ್ಕಿಸಿದಾಗ, ಕಥೆಯೊಂದನ್ನು ಬರೆದಾಗ ಅಥವಾ ಹಾಡನ್ನು ಸಂಯೋಜಿಸಿದಾಗ ಅದು ಗ್ರಂಥಸ್ವಾಮ್ಯ ಹಕ್ಕಿನಿಂದ ರಕ್ಷಿಸಲ್ಪಡುತ್ತದೆ ಎಂದು ತಿಳಿಯಿರಿ ಹಾಗೂ ಯಾರೂ ಅದನ್ನು ನಿಮ್ಮ ಅನುಮತಿ ಇಲ್ಲದೇ ನಕಲು ಮಾಡಲಾರರು. | | ವ್ಯಕ್ತಪಡಿಸಲ್ಪಟ್ಟರೆ ಅದು ಸಂರಕ್ಷಣೆಗೆ ಅರ್ಹವಾಗಿರುತ್ತದೆ.<br>* ಆಲೋಚನೆಗಳ ಮೇಲೆ ಗ್ರಂಥಸ್ವಾಮ್ಯ ಹಕ್ಕು ಇರುವುದಿಲ್ಲ. | ಮರಣಾನಂತರ 60 ವರ್ಷದವರೆಗೆ; ಧ್ವನಿಮುದ್ರಣ ಮತ್ತು ಸಿನಿಮಾಟೋಗ್ರಾಫ್ ಚಲನಚಿತ್ರಗಳು– ಧ್ವನಿಮುದ್ರಣವು ಪ್ರಕಟವಾದ ವರ್ಷದಿಂದ 60 ವರ್ಷಗಳು |
| ಭೌಗೋಳಿಕ ಸಂಕೇತ (Geographical Identification) | ವಸ್ತುವಿಗೆ ಅಪೂರ್ವ ಮತ್ತು ವಿಶಿಷ್ಟ ಲಕ್ಷಣಗಳನ್ನು ಕೊಡುವ ಒಂದು ನಿರ್ದಿಷ್ಟ ಸ್ಥಳದ ಮೂಲವನ್ನು ಹೊಂದಿರುವ ಉತ್ಪನ್ನ<br>* ಪ್ರಪಂಚದ ಯಾವ ಭಾಗದಿಂದ ಒಂದು ಉತ್ಪನ್ನ ಬಂದಿದೆ ಮತ್ತು ಆ ಸ್ಥಳವು ಯಾವಾಗ ಮತ್ತು ಏಕೆ ಅಂತಹ ಪ್ರಕಾರ/ವಸ್ತುವಿಗೆ ಪ್ರಸಿದ್ಧವಾಗಿದೆ ಎಂಬುದನ್ನು GI ಹೇಳುತ್ತದೆ. | ಭೌಗೋಳಿಕ ಸಂಕೇತಗಳ (ನೋಂದಣಿ ಮತ್ತು ಸಂರಕ್ಷಣೆ) ಕಾಯ್ದೆ 1999 | ಉತ್ಪನ್ನದ ಯೋಗ್ಯತೆಗಳು, ಗುಣಗಳು, ಲಕ್ಷಣಗಳು ಅಥವಾ ಪ್ರಸಿದ್ಧಿಯನ್ನು ವಸ್ತುವಿನ ಮೂಲ ಉತ್ಪಾದನಾ ಸ್ಥಳಕ್ಕೆ ಅಗತ್ಯವಾಗಿ ಜೋಡಿಸಬೇಕು | ಹತ್ತು ವರ್ಷಗಳು. ಮುಂದಿನ ನಿರಂತರ 10 ವರ್ಷಗಳವರೆಗೆ ನವೀಕರಿಸಬಹುದಾಗಿದೆ. |

**2. ಪುಟ ಸಂಖ್ಯೆ 558 ರಲ್ಲಿರುವ "ಅಭ್ಯಾಸಗಳು" – ಈ ಭಾಗದಲ್ಲಿ ಬರುವ ಬಹು ಆಯ್ಕೆ ಪ್ರಶ್ನೆಗಳೊಂದಿಗೆ ಈ ಕೆಳಕಂಡ ಪ್ರಶ್ನೆ ಸಂಖ್ಯೆ 6, 7 ಮತ್ತು 8 ಸೇರ್ಪಡೆಯಾಗಿವೆ:**

**ಬಹು ಆಯ್ಕೆ ಪ್ರಶ್ನೆಗಳು:**

6. ಈ ಕೆಳಗಿನ ಯಾವುದನ್ನು ಗ್ರಂಥಸ್ವಾಮ್ಯ ಹಕ್ಕಿನಡಿಯಲ್ಲಿ ಸಂರಕ್ಷಿಸಲಾಗದು.

ಎ) ಸಂಗೀತ ಬಿ) ರೇಖಾಚಿತ್ರ ಸಿ) ವೀಡಿಯೋ ಗೇಮ್ಸ್ ಡಿ) ನಟರು

7. ಈ ಕೆಳಗಿನ ಯಾವುದು ಭೌಗೋಳಿಕ ಸಂಕೇತವಾಗಿದೆ?

ಎ) ಮೋನಾಲಿಸಾ ವರ್ಣಚಿತ್ರ ಬಿ) IRCTC ಲೋಗೋ

ಸಿ) ಡಾರ್ಜಲಿಂಗ್ ಚಹಾ ಡಿ) ಲೈಟ್ ಬಲ್ಬ್

8. ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಕೊಡುಗೆ ಸಲ್ಲಿಸುವಲ್ಲಿ ಉದ್ಯಮಸಾಹಸಿಯ ಪಾತ್ರವೇನು?

ಎ) ಇತರರ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಗುರುತಿಸಿ ಗೌರವಿಸುವುದು

ಬಿ) ಸೃಜನಶೀಲನಾಗಿರುವುದು ಮತ್ತು ಆವಿಷ್ಕಾರಕಾರನಾಗಿರುವುದು

ಸಿ) ತಮ್ಮ ಬೌದ್ಧಿಕ ಹಕ್ಕುಗಳನ್ನು ಸಂರಕ್ಷಿಸಿಕೊಂಡಿರುವುದು

ಡಿ) ಮೇಲಿನ ಎಲ್ಲವೂ

**3. ಪುಟ ಸಂಖ್ಯೆ 558 ರಲ್ಲಿರುವ "ಅಭ್ಯಾಸಗಳು" – ಈ ಭಾಗದಲ್ಲಿ ಬರುವ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳೊಂದಿಗೆ ಈ ಕೆಳಕಂಡ ಪ್ರಶ್ನೆ ಸಂಖ್ಯೆ 6 ಮತ್ತು 7 ಸೇರ್ಪಡೆಯಾಗಿವೆ:**

ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು

6. ಎಲೆಕ್ಟ್ರಾನಿಕ್ಸ್ ಕಂಪನಿಯೊಂದು ಸಣ್ಣ ಕಪ್ ಕೇಕ್ ಕೀ ರಿಂಗ್ಸ್‌ನ ಆಕಾರ ಪೋರ್ಟಬಲ್ ಬ್ಲೂಟೂತ್ ಸ್ಪೀಕರ್‌ಗಳನ್ನು ತಯಾರಿಸಿದೆ ಎಂದು ಭಾವಿಸಿ. ತನ್ನ ವಿನಾಸವನ್ನು ಜನರು ನಕಲು ಮಾಡುವುದನ್ನು ಅದು ಹೇಗೆ ತಡೆಯಬಹುದು?

7. ನಿಮ್ಮ ನೆಚ್ಚಿನ ಪುಸ್ತಕ/ಚಲನಚಿತ್ರಗಳ ಹೆಸರು, ಹಾಡನ್ನು ಬರೆಯಿರಿ. ಅವುಗಳ ಮೂಲ ತಯಾರಕರು/ನಿರ್ಮಾಪಕರು ಯಾರು ಮತ್ತು ಪ್ರತಿ ರಚನೆಗೆ ಯಾರು ಗ್ರಂಥಸ್ವಾಮ್ಯ ಹಕ್ಕು ಹೊಂದಿದ್ದಾರೆ ಎಂಬುದನ್ನು ಕಂಡುಹಿಡಿಯಿರಿ.

**4. ಪುಟ ಸಂಖ್ಯೆ 558 ರಲ್ಲಿರುವ "ಅಭ್ಯಾಸಗಳು" – ಈ ಭಾಗದಲ್ಲಿ ಬರುವ ದೀರ್ಘ ಉತ್ತರದ ಪ್ರಶ್ನೆಗಳೊಂದಿಗೆ ಈ ಕೆಳಕಂಡ ಪ್ರಶ್ನೆ ಸಂಖ್ಯೆ 4 ಸೇರ್ಪಡೆಯಾಗಿದೆ:**

**ದೀರ್ಘ ಉತ್ತರದ ಪ್ರಶ್ನೆಗಳು**

4. ಭಾರತ ಸರ್ಕಾರದ ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಲಕ್ಷಣಗಳನ್ನು ಚರ್ಚಿಸಿ.

**5. ಪುಟ ಸಂಖ್ಯೆ 560 ರಲ್ಲಿರುವ "ನಿಯೋಜಿತ ಕಾರ್ಯ" ದಲ್ಲಿ ಚಟುವಟಿಕೆ 3 ಮತ್ತು 4 ಅನ್ನು ಸೇರ್ಪಡೆಯಾಗಿದೆ:**

3. Worksheet: ಪ್ರತಿಯೊಂದಕ್ಕೂ 20–25 ಪದಗಳಲ್ಲಿ ಉತ್ತರಿಸಿ.

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| 1 | ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ | |

| | | |
|---|---|---|
| | ಭಾರತದಲ್ಲಿ ಯಾವಾಗ ಆರಂಭಿಸಲಾಯಿತು? | |
| 2 | ಎಷ್ಟು ಸಮಯದವರೆಗೆ ಒಂದು ಸಂಸ್ಥೆಯನ್ನು ಸ್ಟಾರ್ಟ್‌ಅಪ್ ಎಂದು ಗುರುತಿಸಲಾಗುತ್ತದೆ? | |
| 3 | ವಿಕಸನಕಾರ/ವಿಕಸನಾಲಯ ಎಂದರೆ ಯಾರು? | |
| 4 | ವೇಗವರ್ಧಕ ಎಂದರೆ ಯಾರು? | |
| 5 | ಭಾರತದಲ್ಲಿರುವ ಸಮೂಹ ಹಣಕಾಸು ಒದಗಿಸುವಿಕೆಯ ಜಾಲತಾಣಗಳನ್ನು ಪಟ್ಟಿಮಾಡಿ. | |
| 6 | ಭಾರತದಲ್ಲಿ ಕ್ರಿಯಾಶೀಲವಾಗಿರುವ ಸಾಹಸಿ ಬಂಡವಾಳ ಹಣಕಾಸುಗಳನ್ನು ಪಟ್ಟಿಮಾಡಿ. | |
| 7 | ಬೂಟ್ ಸ್ಟ್ರಾಪಿಂಗ್ ಮತ್ತು ಉಪಕಾರಿ ಹಣಕಾಸು ಒದಗಿಸುವುದು–ಇವೆರಡೂ ಹೇಗೆ ಭಿನ್ನವಾಗಿವೆ? | |
| 8 | IPR ಎಂದರೆ ಏನು? | |
| 9 | ಉತ್ಪನ್ನಸ್ವಾಮ್ಯ ಹಕ್ಕು–ಇದನ್ನು ವ್ಯಾಖ್ಯಾನಿಸಿ. | |

4. ಚರ್ಚೆ: ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಉದ್ಯಮಶೀಲತೆ ಅಭಿವೃದ್ಧಿಯ ಪಾತ್ರ

ಬಾಕ್ಸ್ ವಿಷಯವನ್ನು ಓದಿ ಮತ್ತು ನಿಮ್ಮ ಉತ್ತರವನ್ನು ಕೊಟ್ಟ ಜಾಗದಲ್ಲಿ ಬರೆದು ಸಲ್ಲಿಸಿರಿ.

1.ಸಂಪನ್ಮೂಲ ಶ್ರೀಮಂತಿಕೆಯ ಹಣೆಪಟ್ಟಿ ಹೊಂದಿದ್ದರೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಬಡತನಕ್ಕೆ ಕಾರಣವೇನು?

2.ಆರ್ಥಿಕ ಬೆಳವಣಿಗೆಗೆ ಕೇವಲ ಸ್ವಾಭಾವಿಕ ಸಂಪನ್ಮೂಲಗಳು ಪ್ರಮುಖ ನಿರ್ಧಾರಕ ಅಂಶಗಳಾಗಿದ್ದಲ್ಲಿ, ಇಡೀ ಆಫ್ರಿಕಾ ಖಂಡ ಅಥವಾ ಲ್ಯಾಟಿನ್ ಅಮೇರಿಕಾ ಅಥವಾ ಏಷಿಯಾದ ಬಹುತೇಕ ಭಾಗಗಳು ಅಭಿವೃದ್ಧಿ ಹೊಂದುತ್ತಿದ್ದವು.

------------------------------------------------------------------------------

------------------------------------------------------------------------------

------------------------------------------------------------------------------

------------------------------------------------------------------------------

------------------------------------------------------------------------------

------------------------------------------------------------------------------